



(ಅವತೀರ್ಣ - ಮಕ್ಕಾದಲ್ಲಿ)

ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

بِسْمِ اللّٰهِ الرَّحْمٰنِ الرَّحِيْمِ ○

1. ಸರ್ವಸ್ತುತಿ ಅಲ್ಲಾಹನಿಗೆ, ಅವನು ತನ್ನ ದಾಸನ ಮೇಲೆ ಈ ಗ್ರಂಥವನ್ನು ಅವತೀರ್ಣ ಗೊಳಿಸಿದನು ಮತ್ತು ಅದರಲ್ಲೇನೂ ವಕ್ರತೆಯನ್ನಿರಿಸಲಿಲ್ಲ.

اَلْحَمْدُ لِلّٰهِ الَّذِيْٓ اَنْزَلَ عَلٰى عَبْدِهِ الْكِتٰبَ وَلَمْ يَجْعَلْ لَّهٗ عِوَجًا ۜ ①

2-3. ನಿಖರವಾದ ನೇರ ಮಾತನ್ನಾಡುವಂತಹ ಗ್ರಂಥ. ಇದು ಜನರಿಗೆ ಅಲ್ಲಾಹನ ಘೋರ ಯಾತನೆಯ ಎಚ್ಚರಿಕೆ ನೀಡಲಿಕ್ಕಾಗಿ ಮತ್ತು ಸತ್ಯವಿಶ್ವಾಸವನ್ನಿರಿಸಿ ಸತ್ಕರ್ಮವೆಸಗುವವರಿಗೆ, ಉತ್ತಮ ಪ್ರತಿಫಲ ಸಿಗಲಿದೆಯೆಂದೂ ಅವರು ಅದರಲ್ಲಿ ಸದಾಕಾಲ ವಾಸಿಸುವರೆಂದೂ ಸುವಾರ್ತೆ ನೀಡಲಿಕ್ಕಾಗಿದೆ-

قَيِّمًا لِّيُنْذِرَ بَاْسًا شَدِيْدًا مِّنْ لَّدُنْهُ وَيُبَشِّرَ الْمُؤْمِنِيْنَ الَّذِيْنَ يَعْمَلُوْنَ الصّٰلِحٰتِ اَنَّ لَهُمْ اَجْرًا حَسَنًا ② مَّاكِثِيْنَ فِيْهِ اَبَدًا ③

4. ಮತ್ತು ಅಲ್ಲಾಹನು ಯಾರನ್ನಾದರೂ ತನ್ನ ಪುತ್ರರನ್ನಾಗಿಸಿದ್ದಾನೆಂದು ಹೇಳುವವರನ್ನು ಎಚ್ಚರಿಸುವುದಕ್ಕಾಗಿದೆ.

وَّيُنْذِرَ الَّذِيْنَ قَالُوا اتَّخَذَ اللّٰهُ وَلَدًا ④

5. ಇದರ ಬಗ್ಗೆ ಅವರಿಗೆ ಜ್ಞಾನವೇನೂ ಇಲ್ಲ. ಅವರ ಪೂರ್ವಿಕರಿಗೂ ಇರಲಿಲ್ಲ. ಅವರ ಬಾಯಿಯಿಂದ ಹೊರಡುವ ಈ ಮಾತು ಬಹಳ ಘೋರವಾದುದು. ಅವರು ಕೇವಲ ಹುಸಿಯನ್ನಾಡು ತ್ತಿದ್ದಾರೆ.

مَا لَهُمْ بِهٖ مِنْ عِلْمٍ وَّلَا لِاٰبَآئِهِمْ ۭ كَبُرَتْ كَلِمَةً تَخْرُجُ مِنْ اَفْوَاهِهِمْ ۭ اِنْ يَّقُوْلُوْنَ اِلَّا كَذِبًا ⑤

6. ಓ ಪೈಗಂಬರರೇ, ಇವರು ಈ ಬೋಧನೆಯ ಮೇಲೆ ವಿಶ್ವಾಸ ವಿರಿಸದಿದ್ದರೆ ಪ್ರಾಯಶಃ ನೀವು ಇವರ ಹಿಂದೆ ವ್ಯಥೆಯಿಂದ ನಿಮ್ಮ ಜೀವವನ್ನೇ ಕಳೆದುಕೊಳ್ಳುವವರಿದ್ದೀರಿ.

فَلَعَلَّكَ بَاخِعٌ نَّفْسَكَ عَلٰٓى اٰثَارِهِمْ اِنْ لَّمْ يُؤْمِنُوْا بِهٰذَا الْحَدِيْثِ اَسَفًا ⑥

7. ವಾಸ್ತವದಲ್ಲಿ ಇವರ ಪೈಕಿ ಯಾರು ಉತ್ತಮ ಕರ್ಮಗಳನ್ನು ಮಾಡುತ್ತಾರೆಂದು ಪರೀಕ್ಷಿಸಲಿಕ್ಕಾಗಿ ನಾವು ಈ ಭೂಮಿ ಯಲ್ಲಿರುವ ಎಲ್ಲ ವಸ್ತುಗಳನ್ನು ಭೂಮಿಗೆ ಅಲಂಕಾರವನ್ನಾಗಿ ಮಾಡಿರುತ್ತೇವೆ.

اِنَّا جَعَلْنَا مَا عَلَى الْاَرْضِ زِيْنَةً لَّهَا لِنَبْلُوَهُمْ اَيُّهُمْ اَحْسَنُ عَمَلًا ⑦

8. ಕಟ್ಟಕಡೆಗೆ ನಾವು ಇದನ್ನೆಲ್ಲಾ ಒಂದು ಬಟ್ಟ ಬಯಲನ್ನಾಗಿ ಮಾಡಿ ಬಿಡುವವರಿದ್ದೇವೆ.

وَاِنَّا لَجٰعِلُوْنَ مَا عَلَيْهَا صَعِيْدًا جُرُزًا ۝٨

9. ಗುಹಾವಾಸಿಗಳು ಮತ್ತು ಶಿಲಾಲೇಖನದವರು[1] ನಮ್ಮ ಅದ್ಭುತ ನಿದರ್ಶನಗಳಲ್ಲಾಗಿದ್ದರೆಂದು ನೀವು ಭಾವಿಸುತ್ತೀರಾ?

اَمْ حَسِبْتَ اَنَّ اَصْحٰبَ الْكَهْفِ وَالرَّقِيْمِ ۙ كَانُوْا مِنْ اٰيٰتِنَا عَجَبًا ۝٩

10. ಆ ಕೆಲವು ಮಂದಿ ತರುಣರು ಗುಹೆಯೊಳಗೆ ಆಶ್ರಯ ಪಡೆದರು ಮತ್ತು, "ಓ ನಮ್ಮ ಪ್ರಭೂ! ನಮಗೆ ನಿನ್ನ ವಿಶಿಷ್ಟ ಕೃಪೆಯನ್ನು ದಯಪಾಲಿಸು ಮತ್ತು ನಮ್ಮ ವ್ಯವಹಾರವನ್ನು ಸುಗಮಗೊಳಿಸು" ಎಂದರು.

اِذْ اَوَى الْفِتْيَةُ اِلَى الْكَهْفِ فَقَالُوْا رَبَّنَآ اٰتِنَا مِنْ لَّدُنْكَ رَحْمَةً وَّهَيِّئْ لَنَا مِنْ اَمْرِنَا رَشَدًا ۝١٠

11. ಆಗ ನಾವು ಅವರನ್ನು ಕಿವಿತಟ್ಟಿ ಅದೇ ಗುಹೆಯೊಳಗೆ ಅನೇಕ ವರ್ಷಗಳ ವರೆಗೆ ಗಾಢ ನಿದ್ರೆಯಲ್ಲಿ ಮಲಗಿಸಿಬಿಟ್ಟೆವು.

فَضَرَبْنَا عَلٰٓى اٰذَانِهِمْ فِى الْكَهْفِ سِنِيْنَ عَدَدًا ۝١١

12. ಅನಂತರ ಅವರ ಎರಡು ಗುಂಪುಗಳಲ್ಲಿ ಯಾವುದು ತನ್ನ (ಗುಹಾ) ವಾಸದ ಕಾಲಾವಧಿಯನ್ನು ಸರಿಯಾಗಿ ಗಣಿಸುತ್ತದೆಂದು ನೋಡಲಿಕ್ಕಾಗಿ ನಾವು ಅವರನ್ನು ಪುನಃ ಎಬ್ಬಿಸಿದೆವು.

ثُمَّ بَعَثْنٰهُمْ لِنَعْلَمَ اَيُّ الْحِزْبَيْنِ اَحْصٰى لِمَا لَبِثُوْٓا اَمَدًا ۝١٢

13. ನಾವು ಅವರ ನಿಜ ಕಥೆಯನ್ನು ನಿಮಗೆ ತಿಳಿಸುತ್ತೇವೆ. ಅವರು ತಮ್ಮ ಪ್ರಭುವಿನ ಮೇಲೆ ವಿಶ್ವಾಸವಿಟ್ಟಿದ್ದ ಕೆಲವು ಮಂದಿ ತರುಣರಾಗಿದ್ದರು. ನಾವು ಅವರಿಗೆ ಸನ್ಮಾರ್ಗದರ್ಶನವನ್ನು ವೃದ್ಧಿಗೊಳಿಸಿದ್ದೆವು.[2]

نَحْنُ نَقُصُّ عَلَيْكَ نَبَاَهُمْ بِالْحَقِّ ۭ اِنَّهُمْ فِتْيَةٌ اٰمَنُوْا بِرَبِّهِمْ وَزِدْنٰهُمْ هُدًى ۝١٣

14. ಅವರು ಎದ್ದಾಗ ನಾವು ಅವರ ಮನಸ್ಸನ್ನು ಬಲಗೊಳಿಸಿದೆವು. ಅವರು ಹೀಗೆ ಘೋಷಿಸಿದರು- "ಆಕಾಶಗಳ ಮತ್ತು ಭೂಮಿಯ ಪ್ರಭುವೇ ನಮ್ಮ ಪ್ರಭು. ನಾವು ಅವನನ್ನು ಬಿಟ್ಟು ಇತರ ಯಾರನ್ನೂ ಆರಾಧ್ಯನೆಂದು ಕರೆದು ಪ್ರಾರ್ಥಿಸಲಾರೆವು. ನಾವು ಹಾಗೆ ಮಾಡಿದರೆ ಅದು ಅಸಂಬದ್ಧ ಮಾತಾಗುವುದು."

وَّرَبَطْنَا عَلٰى قُلُوْبِهِمْ اِذْ قَامُوْا فَقَالُوْا رَبُّنَا رَبُّ السَّمٰوٰتِ وَالْاَرْضِ لَنْ نَّدْعُوَا۟ مِنْ دُوْنِهٖٓ اِلٰـهًا لَّقَدْ قُلْنَآ اِذًا شَطَطًا ۝١٤

1. ಅರ್ಥಾತ್- ತಮ್ಮ ವಿಶ್ವಾಸದ ರಕ್ಷಣೆಗಾಗಿ ಗುಹೆಯಲ್ಲಿ ಆಶ್ರಯ ಪಡೆದ ಯುವಕರು. ಅವರ ಸ್ಮರಣಾರ್ಥವಾಗಿ ಅನಂತರ ಗುಹೆಯಲ್ಲಿ ಫಲಕ ಹಚ್ಚಲಾಗಿತ್ತು.
2. ಈ ಯುವಕರು ಪ್ರವಾದಿ ಮಸೀಹ್‌ರ(ಅ) ಆರಂಭಕಾಲದ ಅನುಯಾಯಿಗಳಾಗಿದ್ದರು. ಅವರು, ಬಹುದೇವಾರಾಧನೆಯಲ್ಲಿ ನಿರತವಾಗಿದ್ದ ಮತ್ತು ಏಕದೇವವಿಶ್ವಾಸಿಗಳ ಬದ್ಧ ವೈರಿಗಳಾಗಿದ್ದ ರೋಮನ್ ಸಾಮ್ರಾಜ್ಯದ ಪ್ರಜೆಗಳಾಗಿದ್ದರು.

15. (ತರುವಾಯ ಅವರು, ಪರಸ್ಪರ ಹೀಗೆ ಹೇಳಿದರು): "ನಮ್ಮ ಜನಾಂಗವು ಜಗತ್ಪಾಲಕನನ್ನು ಬಿಟ್ಟು ಇತರರನ್ನು ತನ್ನ ಆರಾಧ್ಯರಾಗಿ ಮಾಡಿಕೊಂಡಿದೆ. ಅವರು (ಅಥವಾ ಅವುಗಳು) ಆರಾಧನೆಗೆ ಯೋಗ್ಯರೆಂಬ ಬಗ್ಗೆ ಇವರು ಸ್ಪಷ್ಟ ಪ್ರಮಾಣಗಳನ್ನೇಕೆ ತರುವುದಿಲ್ಲ? ಅಲ್ಲಾಹನ ಮೇಲೆ ಮಿಥ್ಯಾರೋಪ ಹೊರಿಸುವವನಿಗಿಂತ ಹಿರಿಯ ಅಕ್ರಮಿ ಇನ್ನಾರಿರಬಹುದು?

هٰٓؤُلَآءِ قَوْمُنَا اتَّخَذُوْا مِنْ دُوْنِهٖٓ اٰلِهَةً ؕ
لَوْلَا يَاْتُوْنَ عَلَيْهِمْ بِسُلْطٰنٍۭ بَيِّنٍ ؕ فَمَنْ
اَظْلَمُ مِمَّنِ افْتَرٰى عَلَى اللّٰهِ كَذِبًا ⑮

16. ನೀವೀಗ ಅವರಿಂದಲೂ ಅವರ ಆರಾಧ್ಯರಾಗಿರುವ ಅಲ್ಲಾಹೇತರರಿಂದಲೂ ಬೇರ್ಪಟ್ಟಿದ್ದೀರಿ. ಆದುದರಿಂದ ನಡೆಯಿರಿ, ಆ ಗುಹೆಯೊಳಗೆ ಆಶ್ರಯ ಪಡೆಯೋಣ. ನಿಮ್ಮ ಪ್ರಭು ನಿಮ್ಮ ಮೇಲೆ ತನ್ನ ಕೃಪಾಶ್ರಯವನ್ನು ವಿಶಾಲಗೊಳಿಸುವನು ಮತ್ತು ನಿಮ್ಮ ಕಾರ್ಯಕ್ಕಾಗಿ ಸಾಧನಾನುಕೂಲತೆಗಳನ್ನು ಒದಗಿಸುವನು."

وَاِذِ اعْتَزَلْتُمُوْهُمْ وَمَا يَعْبُدُوْنَ اِلَّا اللّٰهَ
فَاْوٗٓا اِلَى الْكَهْفِ يَنْشُرْ لَكُمْ رَبُّكُمْ مِّنْ
رَّحْمَتِهٖ وَيُهَيِّئْ لَكُمْ مِّنْ اَمْرِكُمْ مِّرْفَقًا ⑯

17. ನೀವು ಅವರನ್ನು ಗುಹೆಯೊಳಗೆ ನೋಡುತ್ತಿದ್ದರೆ[3] ಸೂರ್ಯನು ಉದಯಿಸುವಾಗ ಅವರ ಗುಹೆಯನ್ನು ಬಿಟ್ಟು ಬಲಭಾಗಕ್ಕೆ ಏರುತ್ತಿರುವಂತೆಯೂ ಅಸ್ತಮಿಸುವಾಗ ಅವರನ್ನು ತಪ್ಪಿಸಿ ಎಡಭಾಗಕ್ಕೆ ಇಳಿಯುತ್ತಿರುವಂತೆಯೂ ಅವರು ಗುಹೆಯೊಳಗೆ ಒಂದು ವಿಶಾಲವಾದ ಸ್ಥಳದಲ್ಲಿ ಬಿದ್ದುಕೊಂಡಿದ್ದುದನ್ನೂ ಕಾಣುತ್ತಿದ್ದಿರಿ. ಇದು ಅಲ್ಲಾಹನ ನಿದರ್ಶನಗಳಲ್ಲೊಂದು. ಅಲ್ಲಾಹನು ಯಾರಿಗೆ ಮಾರ್ಗದರ್ಶನ ನೀಡುವನೋ ಅವನೇ ಮಾರ್ಗದರ್ಶನ ಹೊಂದುವನು ಮತ್ತು ಯಾರನ್ನು ಅಲ್ಲಾಹನು ಪಥಭ್ರಷ್ಟಗೊಳಿಸುವನೋ ಅವನಿಗಾಗಿ ನೀವು ಯಾವ ರಕ್ಷಕ ಮಿತ್ರ- ಮಾರ್ಗದರ್ಶಕನನ್ನೂ ಪಡೆಯಲಾರಿರಿ.

وَتَرَى الشَّمْسَ اِذَا طَلَعَتْ تَّزٰوَرُ عَنْ
كَهْفِهِمْ ذَاتَ الْيَمِيْنِ وَاِذَا غَرَبَتْ
تَّقْرِضُهُمْ ذَاتَ الشِّمَالِ وَهُمْ فِيْ فَجْوَةٍ
مِّنْهُ ؕ ذٰلِكَ مِنْ اٰيٰتِ اللّٰهِ ؕ مَنْ يَّهْدِ
اللّٰهُ فَهُوَ الْمُهْتَدِ ۚ وَمَنْ يُّضْلِلْ فَلَنْ تَجِدَ
لَهٗ وَلِيًّا مُّرْشِدًا ⑰

18. ನೀವು ಅವರನ್ನು ಕಂಡರೆ ಅವರು ಎಚ್ಚರವಿದ್ದಾರೆಂದು ತಿಳಿಯುತ್ತಿದ್ದಿರಿ. ವಸ್ತುತಃ ಅವರು ನಿದ್ರಿಸುತ್ತಿದ್ದರು. ನಾವು ಅವರನ್ನು ಬಲಕ್ಕೂ ಎಡಕ್ಕೂ ಪಾರ್ಶ್ವಪಲ್ಲಟಗೊಳಿಸುತ್ತಿದ್ದೆವು ಮತ್ತು ಅವರ ನಾಯಿಯು ಗುಹೆಯದ್ವಾರದಲ್ಲಿ ಮುಂಗಾಲುಗಳನ್ನು ಹರಡಿ ಕುಳಿತಿತ್ತು. ನೀವೆಲ್ಲಾದರೂ ಅವರನ್ನು ಇಣುಕಿ ನೋಡುತ್ತಿದ್ದರೆ ಹಿಂದಿರುಗಿ ಓಟ ಕೀಳುತ್ತಿದ್ದಿರಿ ಮತ್ತು ಅವರ ದೃಶ್ಯದಿಂದ ನಿಮ್ಮಲ್ಲಿ ಭೀತಿಯುಂಟಾಗಿ ಬಿಡುತ್ತಿತ್ತು.

وَتَحْسَبُهُمْ اَيْقَاظًا وَّهُمْ رُقُوْدٌ ۖۗ وَّ
نُقَلِّبُهُمْ ذَاتَ الْيَمِيْنِ وَذَاتَ الشِّمَالِ ۖۗ
وَكَلْبُهُمْ بَاسِطٌ ذِرَاعَيْهِ بِالْوَصِيْدِ ؕ
لَوِ اطَّلَعْتَ عَلَيْهِمْ لَوَلَّيْتَ مِنْهُمْ فِرَارًا
وَّلَمُلِئْتَ مِنْهُمْ رُعْبًا ⑱

3. ಪರಸ್ಪರ ಒಪ್ಪಂದ ಮಾಡಿಕೊಂಡಂತೆ ಅವರು ನಗರದ ಹೊರವಲಯದ ಪರ್ವತಗಳ ನಡುವೆ ಗುಹೆಯೊಂದರ ಬಳಿ ಹೋಗಿ ಅಡಗಿ ಕುಳಿತರು. ಆ ಮೂಲಕ ಅವರು ಕಲ್ಲೆಸೆದು ಕೊಲ್ಲುವುದರಿಂದ ಅಥವಾ ಧರ್ಮಭ್ರಷ್ಟರಾಗಲು ನಿರ್ಬಂಧಿತರಾಗುವುದರಿಂದ ರಕ್ಷಣೆ ಪಡೆಯಬಯಸಿದ್ದರು. ಇದರ ಪ್ರಸ್ತಾಪವನ್ನು ಈ ಮಧ್ಯೆ ಬಿಟ್ಟು ಬಿಡಲಾಗಿದೆ.

19. ಅವರು ಪರಸ್ಪರ ವಿಚಾರಿಸಿಕೊಳ್ಳಲಿಕ್ಕಾಗಿ ಇದೇ ವೈಚಿತ್ರ್ಯದೊಂದಿಗೆ ನಾವು ಅವರನ್ನು ಎಬ್ಬಿಸಿದೆವು[4] ಅವರಲ್ಲೊಬ್ಬನು- "ಈ ಸ್ಥಿತಿಯಲ್ಲಿ ನೀವು ಎಷ್ಟು ಕಾಲ ಇದ್ದಿರಿ?" ಎಂದನು. ಆಗ ಉಳಿದವರು, "ಪ್ರಾಯಶಃ ಒಂದು ದಿನ ಅಥವಾ ಅದಕ್ಕಿಂತ ಸ್ವಲ್ಪ ಕಡಿಮೆ ಇರಬಹುದು" ಎಂದರು. ತರುವಾಯ ಅವರು, "ನಮ್ಮ ಎಷ್ಟು ಕಾಲಾವಧಿಯು ಈ ಅವಸ್ಥೆಯಲ್ಲಿ ಕಳೆಯಿತೆಂಬುದನ್ನು ಅಲ್ಲಾಹನೇ ಚೆನ್ನಾಗಿ ಬಲ್ಲನು. ಸರಿ, ಈಗ ನಾವು ನಮ್ಮಲ್ಲೊಬ್ಬನನ್ನು ಬೆಳ್ಳಿಯ ಈ ನಾಣ್ಯ ಕೊಟ್ಟು ಪೇಟೆಗೆ ಕಳುಹಿಸೋಣ. ಅವನು ಅತ್ಯುತ್ತಮ ಆಹಾರ ಎಲ್ಲಿ ಸಿಗುತ್ತದೆಂದು ನೋಡಲಿ. ಅಲ್ಲಿಂದ ಅವನು ಸ್ವಲ್ಪ ಆಹಾರವನ್ನು ತರಲಿ. ಅವನು ಸ್ವಲ್ಪ ಜಾಗರೂಕತೆಯಿಂದ ಕಾರ್ಯವೆಸಗಲಿ. ಅವನಿಂದಾಗಿ ನಾವು ಇಲ್ಲಿದ್ದೇವೆಂಬ ಸುಳಿವು ಯಾರಿಗೂ ಸಿಗಬಾರದು.

وَكَذَٰلِكَ بَعَثْنَاهُمْ لِيَتَسَاءَلُوا بَيْنَهُمْ ۚ قَالَ
قَائِلٌ مِّنْهُمْ كَمْ لَبِثْتُمْ ۖ قَالُوا لَبِثْنَا يَوْمًا
أَوْ بَعْضَ يَوْمٍ ۚ قَالُوا رَبُّكُمْ أَعْلَمُ بِمَا لَبِثْتُمْ
فَابْعَثُوا أَحَدَكُم بِوَرِقِكُمْ هَٰذِهِ إِلَى الْمَدِينَةِ
فَلْيَنظُرْ أَيُّهَا أَزْكَىٰ طَعَامًا فَلْيَأْتِكُم
بِرِزْقٍ مِّنْهُ وَلْيَتَلَطَّفْ وَلَا يُشْعِرَنَّ
بِكُمْ أَحَدًا ﴿١٩﴾

20. ಅವರ ಕೈಗೆ ನಾವು ಸಿಕ್ಕಿ ಬಿಟ್ಟರೆ ಅವರು ನಮ್ಮನ್ನು ಕಲ್ಲೆಸೆದು ಕೊಂದೇ ಬಿಡುವರು ಅಥವಾ ಬಲಾತ್ಕಾರವಾಗಿ ನಮ್ಮನ್ನು ತಮ್ಮ ಮತಕ್ಕೆ ಮರಳಿ ಕೊಂಡೊಯ್ಯುವರು. ಹಾಗಾಗಿ ಬಿಟ್ಟರೆ ನಾವೆಂದೂ ಯಶಸ್ವಿಯಾಗಲಾರೆವು" ಎಂದರು.

إِنَّهُمْ إِن يَظْهَرُوا عَلَيْكُمْ يَرْجُمُوكُمْ
أَوْ يُعِيدُوكُمْ فِي مِلَّتِهِمْ وَلَن
تُفْلِحُوا إِذًا أَبَدًا ﴿٢٠﴾

21. ಹೀಗೆ ಅಲ್ಲಾಹನ ವಾಗ್ದಾನವು ಸತ್ಯವೆಂದೂ ಪುನರುತ್ಥಾನದ ಆ ಘಳಿಗೆಯು ಖಂಡಿತವಾಗಿಯೂ ಬಂದೇ ತೀರುವುದೆಂದೂ ಜನರು ತಿಳಿಯುವಂತಾಗಲು ನಾವು ನಗರವಾಸಿಗಳಿಗೆ ಇವರ ಸ್ಥಿತಿಯನ್ನು ತಿಳಿಯಪಡಿಸಿದೆವು.[5] (ನಿಜವಾಗಿ ಇದುವೇ ಚಿಂತನಾರ್ಹ ವಿಷಯವಾಗಿದ್ದರೂ) ಆಗ ಅವರು ಇವರ (ಗುಹೆಯವರ) ಬಗ್ಗೆ ಹೇಗೆ ವರ್ತಿಸಬೇಕೆಂದು ತರ್ಕಿಸುತ್ತಿದ್ದರು. "ಇವರ ಮೇಲೊಂದು ಗೋಡೆ ಕಟ್ಟಿಬಿಡಿರಿ. ಇವರ ವಿಷಯ ಇವರ ಪ್ರಭುವೇ ಚೆನ್ನಾಗಿ

وَكَذَٰلِكَ أَعْثَرْنَا عَلَيْهِمْ لِيَعْلَمُوا أَنَّ
وَعْدَ اللَّهِ حَقٌّ وَأَنَّ السَّاعَةَ لَا رَيْبَ
فِيهَا إِذْ يَتَنَازَعُونَ بَيْنَهُمْ أَمْرَهُمْ
فَقَالُوا ابْنُوا عَلَيْهِم بُنْيَانًا ۖ رَّبُّهُمْ
أَعْلَمُ بِهِمْ ۚ قَالَ الَّذِينَ غَلَبُوا عَلَىٰ

4. ಅರ್ಥಾತ್- ವಿಚಿತ್ರ ರೀತಿಯಲ್ಲಿ ಅವರನ್ನು ನಿದ್ರಿಸುವಂತೆ ಮಾಡಿ ಜಗತ್ತನ್ನು ಅವರ ಬಗೆಗಿನ ತಿಳಿವಳಿಕೆಯಿಂದ ದೂರವಿಡಲಾದಂತೆಯೇ, ದೀರ್ಘಾವಧಿಯ ನಂತರ ಅವರು ಎಬ್ಬಿಸಲ್ಪಡುವುದೂ ಪವಾಡ ಸದೃಶವಾದ ವೈಚಿತ್ರ್ಯವಾಗಿತ್ತು.

5. ಅರ್ಥಾತ್- ಆ ವ್ಯಕ್ತಿ ಊಟ ತರಲಿಕ್ಕಾಗಿ ಪೇಟೆಗೆ ಹೋದಾಗ ಜಗತ್ತು ಬದಲಾಗಿತ್ತು. ಮೂರ್ತಿ ಪೂಜೆಯಲ್ಲಿ ತಲ್ಲೀನವಾಗಿದ್ದ ರೋಮ್, ಕ್ರೈಸ್ತಧರ್ಮ ಸ್ವೀಕರಿಸಿ ದೀರ್ಘ ಕಾಲ ಕಳೆದಿತ್ತು. ಭಾಷೆ, ನಾಗರಿಕತೆ, ಸಂಸ್ಕೃತಿ, ಉಡುಪು ಹೀಗೆ ಎಲ್ಲದರಲ್ಲೂ ಸ್ಪಷ್ಟ ವ್ಯತ್ಯಾಸ ಉಂಟಾಗಿತ್ತು. ಇನ್ನೂರು ವರ್ಷಪೂರ್ವದ ಆ ವ್ಯಕ್ತಿ ತನ್ನ ವೇಶಭೂಷಣ, ಭಾಷೆಗಳೆಲ್ಲದರ ಮೂಲಕ ತಕ್ಷಣ ಜನರ ಗಮನ ಕೇಂದ್ರವಾದನು. ಹಿಂದಿನ ಕಾಲದ ನಾಣ್ಯವನ್ನು ಅವನು ಊಟ ಖರೀದಿಸಲಿಕ್ಕಾಗಿ ಅಂಗಡಿಯವನಿಗೆ ನೀಡಿದಾಗ ಅವನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ವಿಚಾರಣೆ ನಡೆಸಿದಾಗ ಇವನು ಇನ್ನೂರು ವರ್ಷಗಳ ಮೊದಲು ತನ್ನ ವಿಶ್ವಾಸದ ರಕ್ಷಣೆಗಾಗಿ ಓಡಿ ಹೋಗಿದ್ದ ಮಸೀಹ್‌ರ(ಅ) ಅನುಯಾಯಿಗಳಲ್ಲೊಬ್ಬನೆಂದು ತಿಳಿದು ಬಂತು. ಕ್ರೈಸ್ತ ಜನವಾಸ ಪ್ರದೇಶಗಳಲ್ಲಿ ಈ ಸುದ್ದಿ ತಕ್ಷಣ ವ್ಯಾಪಿಸಿತು. ಆಡಳಿತಾಧಿಕಾರಿಗಳ ಜತೆಗೆ ಜನರ ಒಂದು ತಂಡವೇ ಗುಹೆಯ ಬಳಿಗೆ ತಲಪಿತು. ಇನ್ನೂರು ವರ್ಷಗಳ ನಂತರ ನಿದ್ರಿಸಿ ಎದ್ದಿರುವ ವಿಚಾರ ಅವರಿಗೆ ತಿಳಿದಾಗ ಅವರು ತಮ್ಮ ಕ್ರೈಸ್ತ ಸಹೋದರರಿಗೆ ವಂದಿಸಿ ಮಲಗಿ ಬಿಟ್ಟರು. ಅನಂತರ ಅವರ ಪ್ರಾಣ ಹಾರಿಹೋಯಿತು.

ಬಲ್ಲ"[6] ಎಂದು ಕೆಲವರು ಹೇಳಿದರು. ಆದರೆ ಅವರ ವ್ಯವಹಾರ ಗಳಲ್ಲಿ ಮೇಲುಗೈ ಉಳ್ಳವರು, "ನಾವು ಇವರ ಮೇಲೊಂದು ಆರಾಧನಾಲಯವನ್ನು ನಿರ್ಮಿಸುವೆವು' ಎಂದರು.[7]

أَمْرِهِمْ لَنَتَّخِذَنَّ عَلَيْهِم مَّسْجِدًا ﴿٢١﴾

22. ಅವರು ಮೂವರಿದ್ದರೆಂದೂ ನಾಲ್ಕನೆಯದು ಅವರ ನಾಯಿಯಾಗಿ ತ್ತೆಂದೂ ಕೆಲವರೆನ್ನುವರು. ಇನ್ನು ಕೆಲವರು ಅವರು ಐವರಿದ್ದ ರೆಂದೂ ಆರನೆಯದು ಅವರ ನಾಯಿಯಾಗಿತ್ತೆಂದೂ ಹೇಳುವರು. ಇವೆಲ್ಲ ಊಹೆಗಳು. ಮತ್ತೆ ಕೆಲವರು ಏಳುಮಂದಿ ಇದ್ದರೆಂದೂ ಎಂಟನೆಯದು ಅವರ ನಾಯಿಯಾಗಿತ್ತೆಂದೂ ಹೇಳುತ್ತಾರೆ.[8] ಹೇಳಿರಿ- "ಅವರು ಎಷ್ಟು ಮಂದಿ ಇದ್ದರೆಂದು ನನ್ನ ಪ್ರಭು ಮಾತ್ರ ಬಲ್ಲನು. ಅವರ ಸರಿಯಾದ ಸಂಖ್ಯೆಯನ್ನು ಕೆಲವೇ ಮಂದಿಬಲ್ಲರಷ್ಟೇ. ಆದುದರಿಂದ ಅವರ ಸಂಖ್ಯೆಯ ಬಗ್ಗೆ ಸ್ಥೂಲವಾದ ಮಾತನ್ನು ಮೀರಿ ಜನರೊಡನೆ ವಾದಿಸಬೇಡಿರಿ ಮತ್ತು ಅವರ ಕುರಿತು ಯಾರೊಡನೆಯೂ ವಿಚಾರಿಸಲೂ ಬೇಡಿರಿ.[9]

سَيَقُولُونَ ثَلَاثَةٌ رَّابِعُهُمْ كَلْبُهُمْ وَ
يَقُولُونَ خَمْسَةٌ سَادِسُهُمْ كَلْبُهُمْ رَجْمًا
بِالْغَيْبِ ۖ وَيَقُولُونَ سَبْعَةٌ وَثَامِنُهُمْ
كَلْبُهُمْ ۚ قُل رَّبِّي أَعْلَمُ بِعِدَّتِهِم مَّا
يَعْلَمُهُمْ إِلَّا قَلِيلٌ ۗ فَلَا تُمَارِ فِيهِمْ
إِلَّا مِرَاءً ظَاهِرًا وَلَا تَسْتَفْتِ فِيهِم
مِّنْهُمْ أَحَدًا ﴿٢٢﴾ ربع

23. ಮತ್ತು[10] ಗಮನಿಸಿರಿ, ಯಾವ ವಿಷಯದ ಬಗೆಗೂ ನಾನು ನಾಳೆ ಈ ಕೆಲಸವನ್ನು ಮಾಡಿಬಿಡುವೆನು ಎನ್ನಬೇಡಿರಿ.

وَلَا تَقُولَنَّ لِشَيْءٍ إِنِّي فَاعِلٌ ذَٰلِكَ غَدًا ﴿٢٣﴾

6. ವಿವರಣಾ ಶೈಲಿಯಿಂದ ಇದು ಕ್ರೈಸ್ತರ ಪೈಕಿಯ ಸಜ್ಜನರ ಮಾತಾಗಿತ್ತೆಂದು ವ್ಯಕ್ತವಾಗುತ್ತದೆ. ಗುಹೆಯವರು, ಗುಹೆಯೊಳಗೆ ಮಲಗಿಕೊಂಡಿದ್ದಂತೆಯೇ ಮಲಗಿರಲಿ. ಗುಹೆಯ ಬಾಯಿಯಲ್ಲೊಂದು ಕಲ್ಲು ಚಪ್ಪಡಿಯನ್ನಿಟ್ಟು ಬಿಡಿರಿ. ಈ ವ್ಯಕ್ತಿಗಳು ಯಾರಾಗಿದ್ದರು, ಅವರ ಸ್ಥಾನಮಾನವೇನು, ಅವರ ಪರಿಣಾಮವೇನಾಗಲಿದೆ ಎಂಬುದನ್ನೆಲ್ಲಾ ಅವರ ಪ್ರಭುವೇ ಚೆನ್ನಾಗಿ ಬಲ್ಲನು ಎಂಬುದು ಅವರ ಅಭಿಪ್ರಾಯವಾಗಿತ್ತು.

7. ಇದಕ್ಕೆ ಕಾರಣವೇನೆಂದರೆ ಆಗ ಕ್ರೈಸ್ತರಲ್ಲಿ ಬಹುದೇವಾರಾಧನೆಯಿಂದ ಕೂಡಿದಂತಹ ವಿಚಾರಗಳು ಹರಡಿದ್ದವು. ಹಳೆಯ ಮೂರ್ತಿಗಳ ಸ್ಥಾನದಲ್ಲಿ ಅವರಿಗೆ ಆರಾಧನೆ ಮಾಡಲು ಈ ಆರಾಧ್ಯರುಗಳು ದೊರೆತಿದ್ದರು.

8. ಈ ಘಟನೆ ನಡೆದು ಇನ್ನೂರ ಎಪ್ಪತ್ತೈದು ವರ್ಷಗಳು ಕಳೆದ ಬಳಿಕವೂ ಕುರ್‌ಆನ್ ಅವತೀರ್ಣ ಗೊಂಡ ಕಾಲದಲ್ಲಿ ಅದರ ಬಗ್ಗೆ ಕ್ರೈಸ್ತರಲ್ಲಿ ಅನೇಕ ತರದ ಐತಿಹ್ಯಗಳು ಪ್ರಚಲಿತದಲ್ಲಿದ್ದವು ಎಂದು ಇದರಿಂದ ವ್ಯಕ್ತವಾಗುತ್ತದೆ. ಆದರೆ ಯಾರ ಬಳಿಯೂ ನಂಬಲರ್ಹವಾದಂತಹ ವಿವರಗಳಿರಲಿಲ್ಲ. ಅವರ ಮೂರನೆಯ ಹೇಳಿಕೆಯನ್ನು ಅಲ್ಲಾಹನು ನಿರಾಕರಿಸಿಲ್ಲ. ಆದ್ದರಿಂದ ಅವರ ನಿಜವಾದ ಸಂಖ್ಯೆ ಏಳೇ ಆಗಿರಬಹುದು ಎಂದು ಭಾವಿಸಬಹುದಾಗಿದೆ.

9. ಅರ್ಥಾತ್- ಅವರ ಸಂಖ್ಯೆ ಎಷ್ಟಿತ್ತು ಎಂಬುದು ಮುಖ್ಯವಲ್ಲ. ಬದಲಾಗಿ ಆ ಘಟನೆಯಿಂದ ದೊರೆಯುವ ಪಾಠ ಮುಖ್ಯವಾದುದಾಗಿದೆ.

10. ಇದೊಂದು ಉಪಮಾತಾಗಿದೆ. ಸೂಕ್ತದಲ್ಲಿ ಪ್ರಸ್ತಾಪಿಸಲಾಗಿರುವ ವಿಷಯಕ್ಕೆ ಅನುಗುಣವಾಗಿ ವಾಕ್ಸರಣಿಯ ಮಧ್ಯದಲ್ಲಿ ಇದನ್ನು ಹೇಳಲಾಗಿದೆ. ಅಸ್ಹಾಬುಲ್ ಕಹಫ್ ಅಥವಾ ಗುಹೆಯವರ ನಿಜವಾದ ಸಂಖ್ಯೆ ಎಷ್ಟಿತ್ತು ಎಂಬುದರ ಜ್ಞಾನ ಅಲ್ಲಾಹನಿಗೆ ಮಾತ್ರವಿದೆ ಮತ್ತು ನೀವು ಅದರ ಬಗ್ಗೆ ಸಂಶೋಧನೆ ನಡೆಸುವುದು ಅನಗತ್ಯ ಎಂದು ಹಿಂದಿನ ಸೂಕ್ತದಲ್ಲಿ ನಿರ್ದೇಶಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಮುಂದಿನ ವಿಷಯವನ್ನು ಪ್ರಸ್ತಾಪಿಸುವುದಕ್ಕೆ ಮೊದಲು ಉಪಮಾತಿನ ರೂಪದಲ್ಲಿ ಇದನ್ನು ಹೇಳಲಾಗಿದೆ. ಜತೆಗೆ ಪ್ರವಾದಿವರ್ಯ(ಸ) ಮತ್ತು ಸತ್ಯವಿಶ್ವಾಸಿಗಳಿಗೆ ಒಂದು ಮಾರ್ಗದರ್ಶನವನ್ನೂ ನೀಡಲಾಗಿದೆ. ಅದೇನೆಂದರೆ, "ನಾನು ಈ ಕೆಲಸವನ್ನು ನಾಳೆ ಮಾಡಿ ಬಿಡುತ್ತೇನೆ" ಎಂದು ದೃಢವಾದ ಧ್ವನಿಯಲ್ಲಿ ನೀವೆಂದೂ ಹೇಳದಿರಿ. ಆ ಕೆಲಸವನ್ನು ನಿಮಗೆ ಮಾಡಲು ಸಾಧ್ಯವಿದೆಯೋ ಇಲ್ಲವೋ ಎಂದು ನಿಮಗೇನು ಗೊತ್ತು."

24. ಅಲ್ಲಾಹನು ಇಚ್ಛಿಸುವ ಹೊರತು (ನೀವೇನನ್ನೂ ಮಾಡಲಾರಿರಿ). ಮರವೆಯಿಂದ ಇಂತಹ ಮಾತು ನಿಮ್ಮ ಬಾಯಿಯಿಂದ ಬಂದು ಬಿಟ್ಟರೆ ಕೂಡಲೇ ನಿಮ್ಮ ಪ್ರಭುವನ್ನು ಸ್ಮರಿಸಿಕೊಳ್ಳಿರಿ ಮತ್ತು ನನ್ನ ಪ್ರಭು ಈ ವಿಷಯದಲ್ಲಿ ಸತ್ಯಕ್ಕೆ ಸಮೀಪವಾದುದರ ಕಡೆಗೆ ನನಗೆ ಮಾರ್ಗದರ್ಶನ ಮಾಡುವನೆಂದು ನಾನು ನಿರೀಕ್ಷಿಸುತ್ತೇನೆನ್ನಿರಿ.

إِلَّآ أَن يَشَآءَ ٱللَّهُ ۚ وَٱذْكُر رَّبَّكَ إِذَا نَسِيتَ
وَقُلْ عَسَىٰٓ أَن يَهْدِيَنِ رَبِّى لِأَقْرَبَ
مِنْ هَٰذَا رَشَدًا ﴿٢٤﴾

25. ಅವರು ತಮ್ಮ ಗುಹೆಯಲ್ಲಿ ಮುನ್ನೂರು ವರ್ಷಗಳಿದ್ದರು, (ಕೆಲವರ ಕಾಲಗಣನೆಯಲ್ಲಿ) ಇನ್ನೂ 9 ವರ್ಷ ಹೆಚ್ಚಿದೆ.

وَلَبِثُوا۟ فِى كَهْفِهِمْ ثَلَٰثَ مِا۟ئَةٍ سِنِينَ
وَٱزْدَادُوا۟ تِسْعًا ﴿٢٥﴾

26. ಅವರು ತಂಗಿದ್ದ ಕಾಲಾವಧಿ ಎಷ್ಟೆಂಬುದು ಅಲ್ಲಾಹನಿಗೇ ಚೆನ್ನಾಗಿ ಗೊತ್ತು[11] ಎಂದು ನೀವು ಹೇಳಿರಿ- ಆಕಾಶಗಳ ಮತ್ತು ಭೂಮಿಯ ಎಲ್ಲ ರಹಸ್ಯ ಸಂಗತಿಗಳು ಅವನಿಗೆ ಮಾತ್ರ ತಿಳಿದಿದೆ. ಅವನ ವೀಕ್ಷಣವೂ ಶ್ರವಣವೂ ಅದೆಷ್ಟು ಸೂಕ್ಷ್ಮ! ಅವನ ಹೊರತು (ಭೂಮಿ-ಆಕಾಶಗಳಲ್ಲಿರುವ ಸೃಷ್ಟಿಗಳ) ರಕ್ಷಕ ಮಿತ್ರ ಇನ್ನಾರೂ ಇಲ್ಲ, ಅವನು ತನ್ನ ಆಜ್ಞಾಧಿಕಾರದಲ್ಲಿ ಯಾರನ್ನೂ ಭಾಗೀದಾರನಾಗಿ ಮಾಡುವುದಿಲ್ಲ.

قُلِ ٱللَّهُ أَعْلَمُ بِمَا لَبِثُوا۟ ۖ لَهُۥ غَيْبُ
ٱلسَّمَٰوَٰتِ وَٱلْأَرْضِ ۖ أَبْصِرْ بِهِۦ وَأَسْمِعْ ۚ
مَا لَهُم مِّن دُونِهِۦ مِن وَلِىٍّ وَلَا يُشْرِكُ
فِى حُكْمِهِۦٓ أَحَدًا ﴿٢٦﴾

27. ಓ ಪೈಗಂಬರರೇ, ನಿಮ್ಮ ಮೇಲೆ ನಿಮ್ಮ ಪ್ರಭುವಿನ ಗ್ರಂಥದಿಂದ 'ದೇವವಾಣಿ' ಮಾಡಲಾಗಿರುವುದನ್ನು (ಇದ್ದಕ್ಕಿದ್ದಂತೆ) ಓದಿ ಹೇಳಿರಿ. ಅದರ ವಚನಗಳನ್ನು ಬದಲಾಯಿಸುವ ಅಧಿಕಾರ ಯಾರಿಗೂ ಇಲ್ಲ, (ನೀವು ಯಾರಿಗಾಗಿಯಾದರೂ ಅದರಲ್ಲಿ ಬದಲಾವಣೆಗಳನ್ನು ಮಾಡಿದರೆ) ಅವನಿಂದ ತಪ್ಪಿಸಿಕೊಂಡು ಓಡಿಹೋಗತಕ್ಕ ಯಾವ ಅಭಯಸ್ಥಾನವನ್ನೂ ಪಡೆಯಲಾರಿರಿ.

وَٱتْلُ مَآ أُوحِىَ إِلَيْكَ مِن كِتَابِ رَبِّكَ ۖ
لَا مُبَدِّلَ لِكَلِمَٰتِهِۦ وَلَن تَجِدَ مِن
دُونِهِۦ مُلْتَحَدًا ﴿٢٧﴾

28. ತಮ್ಮ ಪ್ರಭುವಿನ ಸಂಪ್ರೀತಿಯ ಪ್ರಾಪ್ತಿಯನ್ನು ಬಯಸಿ ಬೆಳಗುಬೈಗುಗಳಲ್ಲಿ ಅವನನ್ನು ಪ್ರಾರ್ಥಿಸುತ್ತಿರುವವರ ಸಹವಾಸ ದಲ್ಲಿರಲು ನಿಮ್ಮ ಮನಸ್ಸನ್ನು ಸಂತೃಪ್ತಗೊಳಿಸಿಕೊಳ್ಳಿರಿ ಮತ್ತು ಅವರ ಕಡೆಯಿಂದ ನಿಮ್ಮ ದೃಷ್ಟಿಯನ್ನೆಂದೂ (ಬೇರೆ ಕಡೆಗೆ) ತಿರುಗಿಸಬೇಡಿರಿ. ನೀವು ಇಹಲೋಕದ ಸೊಬಗನ್ನು ಬಯಸು ತ್ತೀರಾ? ನಾವು ನಮ್ಮ ಸ್ಮರಣೆಯಿಂದ ಬೋಧಶೂನ್ಯವಾಗಿ ಮಾಡಿರುವಂಥವನನ್ನೂ ತನ್ನ ದೇಹೇಚ್ಛೆಗಳ ಅನುಸರಣೆಯನ್ನು

وَٱصْبِرْ نَفْسَكَ مَعَ ٱلَّذِينَ يَدْعُونَ
رَبَّهُم بِٱلْغَدَوٰةِ وَٱلْعَشِىِّ يُرِيدُونَ
وَجْهَهُۥ ۖ وَلَا تَعْدُ عَيْنَاكَ عَنْهُمْ تُرِيدُ
زِينَةَ ٱلْحَيَوٰةِ ٱلدُّنْيَا ۖ وَلَا تُطِعْ مَنْ
أَغْفَلْنَا قَلْبَهُۥ عَن ذِكْرِنَا وَٱتَّبَعَ هَوَىٰهُ

11. ಅರ್ಥಾತ್- 'ಅಸ್ಹಾಬುಲ್ ಕಹಫ್' ಅಥವಾ ಗುಹೆಯವರ ಸಂಖ್ಯೆಯಂತೆಯೇ ಅವರು ತಂಗಿದ್ದ ಅವಧಿ ಎಷ್ಟು ಎಂಬ ಬಗ್ಗೆಯೂ ಜನರಲ್ಲಿ ಅಭಿಪ್ರಾಯ ವ್ಯತ್ಯಾಸವಿದೆ. ಆದರೆ ನೀವು ಅದರ ಶೋಧದಲ್ಲಿರಬೇಕಾಗಿಲ್ಲ. ಅವರು ಎಷ್ಟು ಕಾಲ ಆ ಸ್ಥಿತಿಯಲ್ಲಿದ್ದರೆಂಬುದನ್ನು ಅಲ್ಲಾಹನೇ ಬಲ್ಲ.

وَكَانَ أَمْرُهُ فُرُطًا ﴿٢٨﴾ الثلثة

ಸ್ವೀಕರಿಸಿಕೊಂಡಿರುವವನನ್ನೂ ಮಿತಿತಪ್ಪಿ ವರ್ತಿಸುವಂಥವನನ್ನೂ ಅನುಸರಿಸಬೇಡಿರಿ.[12]

وَقُلِ الْحَقُّ مِن رَّبِّكُمْ فَمَن شَآءَ فَلْيُؤْمِن وَّمَن شَآءَ فَلْيَكْفُرْ إِنَّآ أَعْتَدْنَا لِلظَّٰلِمِينَ نَارًا أَحَاطَ بِهِمْ سُرَادِقُهَا وَإِن يَسْتَغِيثُوا يُغَاثُوا بِمَآءٍ كَالْمُهْلِ يَشْوِى الْوُجُوهَ بِئْسَ الشَّرَابُ وَسَآءَتْ مُرْتَفَقًا ﴿٢٩﴾

29. ಸ್ಪಷ್ಟವಾಗಿ (ಹೀಗೆ) ಹೇಳಿಬಿಡಿರಿ- ಇದು ನಿಮ್ಮ ಪ್ರಭುವಿನ ಕಡೆಯಿಂದ ಬಂದ ಸತ್ಯ. ಇಷ್ಟವಿದ್ದವರು ಸ್ವೀಕರಿಸಿಕೊಳ್ಳಲಿ, ಇಷ್ಟವಿದ್ದವರು ನಿರಾಕರಿಸಲಿ. (ನಿರಾಕರಿಸುವ) ಅಕ್ರಮಿಗಳಿಗೆ ನಾವು ಒಂದು ಅಗ್ನಿಯನ್ನು ಸಿದ್ಧಗೊಳಿಸಿಬಿಟ್ಟಿರುತ್ತೇವೆ. ಅದರ ಜ್ವಾಲೆಗಳು ಅವರನ್ನು ಆವರಿಸಿಕೊಂಡಿವೆ. ಅಲ್ಲಿ ಅವರು ನೀರು ಬೇಕೆಂದು ಕೇಳಿದಾಗ ಎಣ್ಣೆಯ ಮಡ್ಡಿಯಂತಹ ಹಾಗೂ ಬಾಯಿಯನ್ನು ಸುಟ್ಟು ಹಾಕುವಂತಹ ನೀರಿನಿಂದ ಅವರನ್ನು ಸತ್ಕರಿಸಲಾಗುವುದು. ಅತ್ಯಂತ ಕೆಟ್ಟ ಪೇಯವದು ಮತ್ತು ಅತಿಕೆಟ್ಟ ವಿಶ್ರಾಂತಿ ಗೃಹವದು.

إِنَّ الَّذِينَ ءَامَنُوا وَعَمِلُوا الصَّٰلِحَٰتِ إِنَّا لَا نُضِيعُ أَجْرَ مَنْ أَحْسَنَ عَمَلًا ﴿٣٠﴾

30. ಇನ್ನು ಸತ್ಯವಿಶ್ವಾಸವನ್ನು ಸ್ವೀಕರಿಸಿ ಸತ್ಕರ್ಮವೆಸಗುವವರ ವಿಷಯ. ನಾವು ಖಂಡಿತವಾಗಿಯೂ ಸತ್ಕರ್ಮಿಗಳ ಸತ್ಫಲವನ್ನು ವ್ಯರ್ಥಗೊಳಿಸುವುದಿಲ್ಲ.

أُولَٰٓئِكَ لَهُمْ جَنَّٰتُ عَدْنٍ تَجْرِى مِن تَحْتِهِمُ الْأَنْهَٰرُ يُحَلَّوْنَ فِيهَا مِنْ أَسَاوِرَ مِن ذَهَبٍ وَيَلْبَسُونَ ثِيَابًا خُضْرًا مِّن سُندُسٍ وَإِسْتَبْرَقٍ مُّتَّكِـِٔينَ فِيهَا عَلَى الْأَرَآئِكِ نِعْمَ الثَّوَابُ وَحَسُنَتْ مُرْتَفَقًا ﴿٣١﴾ ع

31. ಅವರಿಗಾಗಿ ಸದಾ ಹಸಿರಾದ ಸ್ವರ್ಗೋದ್ಯಾನಗಳಿವೆ. ಅವುಗಳ ತಳಭಾಗದಲ್ಲಿ ಕಾಲುವೆಗಳು ಹರಿಯುತ್ತಿರುವುವು. ಅಲ್ಲಿ ಅವರು ಬಂಗಾರದ ಕಂಕಣಗಳಿಂದ ಶೃಂಗರಿಸಲ್ಪಡುವರು.[13] ತೆಳ್ಳಗಿನ ರೇಶ್ಮೆ, ಜರತಾರಿ ಹಸಿರು ಬಟ್ಟೆಗಳನ್ನು ಧರಿಸುವರು ಮತ್ತು ಉನ್ನತ ಪೀಠಗಳ ಮೇಲೆ ದಿಂಬುಗಳಿಗೆ ಒರಗಿ ಕುಳಿತಿರುವರು. ಅತ್ಯುತ್ತಮ ಪ್ರತಿಫಲ ಮತ್ತು ಅತ್ಯುನ್ನತ ಮಟ್ಟದ ವಿಶ್ರಾಂತಿ ಧಾಮ!

وَاضْرِبْ لَهُم مَّثَلًا رَّجُلَيْنِ جَعَلْنَا لِأَحَدِهِمَا جَنَّتَيْنِ مِنْ أَعْنَٰبٍ وَحَفَفْنَٰهُمَا بِنَخْلٍ وَجَعَلْنَا بَيْنَهُمَا زَرْعًا ﴿٣٢﴾

32. ಓ ಪೈಗಂಬರರೇ, ಅವರ ಮುಂದೆ ಒಂದು ಉಪಮೆಯನ್ನಿರಿಸಿರಿ. ಇಬ್ಬರಿದ್ದರು, ಅವರಲ್ಲೊಬ್ಬನಿಗೆ ನಾವು ಎರಡು ದ್ರಾಕ್ಷೆಯ ತೋಟಗಳನ್ನು ಕೊಟ್ಟೆವು. ಅವುಗಳ ಸುತ್ತಲೂ ಖರ್ಜೂರದ ಮರಗಳ ಆವರಣ ಮಾಡಿದೆವು. ಅವುಗಳ ಮಧ್ಯೆ ಕೃಷಿ ಭೂಮಿಯನ್ನಿರಿಸಿದೆವು.

12. ಅರ್ಥಾತ್- ಅವನ ಮಾತನ್ನು ಒಪ್ಪದಿರಿ, ಅವನ ಮುಂದೆ ಬಾಗದಿರಿ, ಅವನ ಇಚ್ಛೆಯನ್ನು ಪೂರ್ತೀಕರಿಸದಿರಿ, ಅವನು ಹೇಳಿದ್ದನ್ನು ಪಾಲಿಸದಿರಿ - ಹೀಗೆ ಅನುಸರಣೆ ಎಂಬ ಪದ ಇಲ್ಲಿ ವಿಶಾಲಾರ್ಥದಲ್ಲಿ ಪ್ರಯೋಗವಾಗಿದೆ.

13. ಹಿಂದಿನ ಕಾಲದಲ್ಲಿ ರಾಜರುಗಳು ಚಿನ್ನದ ಬಳೆ ಧರಿಸುತ್ತಿದ್ದರು. ಸ್ವರ್ಗದವರ ವಸ್ತ್ರದ ಜತೆಗೆ ಇದರ ಪ್ರಸ್ತಾಪ ಮಾಡಲು ಕಾರಣ ಅವರಿಗೆ ಅಲ್ಲಿ ರಾಜ ವೈಭವದ ಬಟ್ಟೆಯನ್ನು ಧರಿಸಲು ನೀಡಲಾಗುವುದು ಎಂದು ತಿಳಿಸುವುದಾಗಿದೆ. ಸತ್ಯನಿಷೇಧಿಯೂ ಕರ್ಮಭ್ರಷ್ಟನೂ ಆದ ರಾಜ ಅಲ್ಲಿ ಅತ್ಯಂತ ನಿಂದ್ಯನೂ ನೀಚನೂ ಆಗಿರುವನು. ಸತ್ಯವಿಶ್ವಾಸಿಯಾದ ಸಚ್ಚರಿತ ಕಾರ್ಮಿಕನೊಬ್ಬ, ರಾಜವೈಭವದೊಂದಿಗೆ ಅಲ್ಲಿರುವನು.

33. ಎರಡೂ ತೋಟಗಳು ತುಂಬಾ ಫಲ ಕೊಡುವುದರಲ್ಲಿ ಏನೂ ಕೊರತೆ ಮಾಡಲಿಲ್ಲ. ಆ ತೋಟಗಳಲ್ಲಿ ನಾವು ಒಂದು ಕಾಲುವೆಯನ್ನು ಹರಿಸಿದೆವು.

كِلْتَا الْجَنَّتَيْنِ اٰتَتْ اُكُلَهَا وَلَمْ تَظْلِمْ مِّنْهُ شَيْـًٔا ۙ وَّفَجَّرْنَا خِلٰلَهُمَا نَهَرًا ﴿٣٣﴾

34. ಮತ್ತು ಅವನಿಗೆ ತುಂಬ ಲಾಭ ಸಿಕ್ಕಿತು. ಇವನ್ನೆಲ್ಲಾ ಪಡೆದು ಅವನು ತನ್ನ ನೆರೆಯವನೊಡನೆ ಮಾತಾಡುತ್ತಾ, "ನಾನು ನಿನಗಿಂತ ದೊಡ್ಡ ಧನಿಕ ಮತ್ತು ನಿನಗಿಂತಲೂ ಹೆಚ್ಚು ಜನಬಲ ಹೊಂದಿರು ತ್ತೇನೆ" ಎಂದನು.

وَّكَانَ لَهٗ ثَمَرٌ ۚ فَقَالَ لِصَاحِبِهٖ وَهُوَ يُحَاوِرُهٗٓ اَنَا اَكْثَرُ مِنْكَ مَالًا وَّاَعَزُّ نَفَرًا ﴿٣٤﴾

35. ಅನಂತರ ಅವನು ತನ್ನ ತೋಟದೊಳಗೆ ಪ್ರವೇಶಿಸಿದನು ಮತ್ತು ತನ್ನ ಪಾಲಿಗೆ ತಾನೇ ಅಕ್ರಮಿಯಾಗುತ್ತ ಇಂತೆಂದನು - "ಈ ಸಂಪತ್ತು ಎಂದಾದರೂ ನಾಶವಾಗಿ ಹೋದೀತೆಂದು ನಾನೆಣಿ ಸುವುದಿಲ್ಲ-

وَدَخَلَ جَنَّتَهٗ وَهُوَ ظَالِمٌ لِّنَفْسِهٖ ۚ قَالَ مَآ اَظُنُّ اَنْ تَبِيْدَ هٰذِهٖٓ اَبَدًا ﴿٣٥﴾

36. ಮತ್ತು ಪುನರುತ್ಥಾನದ ಘಳಿಗೆಯು ಎಂದಾದರೂ ಬಂದೀತೆಂದೂ ನಾನು ಭಾವಿಸುವುದಿಲ್ಲ. ಆದರೂ ನಾನೊಂದು ವೇಳೆ ನನ್ನ ಪ್ರಭುವಿನ ಸನ್ನಿಧಿಗೆ ಮರಳಿಸಲ್ಪಟ್ಟರೂ ಇದಕ್ಕಿಂತಲೂ ಉತ್ತಮ ಸ್ಥಳವನ್ನು ಖಂಡಿತವಾಗಿಯೂ ಪಡೆಯುವೆನು."

وَّمَآ اَظُنُّ السَّاعَةَ قَاۤىِٕمَةً ۙ وَّلَىِٕنْ رُّدِدْتُّ اِلٰى رَبِّيْ لَاَجِدَنَّ خَيْرًا مِّنْهَا مُنْقَلَبًا ﴿٣٦﴾

37. ಅವನ ನೆರೆಯವನು ಮಾತಾಡುತ್ತ ಅವನೊಡನೆ ಹೀಗೆಂದನು, "ನಿನ್ನನ್ನು ಮಣ್ಣಿನಿಂದ ಆ ಬಳಿಕ ವೀರ್ಯದಿಂದ ಸೃಷ್ಟಿಸಿದ ಮತ್ತು ನಿನ್ನನ್ನು ಓರ್ವ ಪರಿಪೂರ್ಣ ಮನುಷ್ಯನನ್ನಾಗಿ ಮಾಡಿ ನಿಲ್ಲಿಸಿದಾತನನ್ನು ನಿರಾಕರಿಸುವೆಯಾ?

قَالَ لَهٗ صَاحِبُهٗ وَهُوَ يُحَاوِرُهٗٓ اَكَفَرْتَ بِالَّذِيْ خَلَقَكَ مِنْ تُرَابٍ ثُمَّ مِنْ نُّطْفَةٍ ثُمَّ سَوّٰىكَ رَجُلًا ﴿٣٧﴾

38. ಇನ್ನು ನನ್ನ ವಿಷಯ. ನನ್ನ ಪ್ರಭು ಆ ಅಲ್ಲಾಹನೇ. ನಾನು ಅವನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿ ಮಾಡುವುದಿಲ್ಲ.

لٰكِنَّا۠ هُوَ اللّٰهُ رَبِّيْ وَلَآ اُشْرِكُ بِرَبِّيْٓ اَحَدًا ﴿٣٨﴾

39. ನೀನು ನಿನ್ನ ತೋಟದೊಳಗೆ ಪ್ರವೇಶಿಸುತ್ತಿರುವಾಗ ನಿನ್ನ ಬಾಯಿಯಿಂದ 'ಮಾಶಾ ಅಲ್ಲಾಹು ಲಾಕುವ್ವತ ಇಲ್ಲಾ ಬಿಲ್ಲಾಹ್'[14] (ಎಲ್ಲವೂ ಅಲ್ಲಾಹನಿಚ್ಛಿಸಿದಂತೆಯೇ ಆಗುತ್ತದೆ

وَلَوْلَآ اِذْ دَخَلْتَ جَنَّتَكَ قُلْتَ مَا شَاۤءَ اللّٰهُ ۙ لَا قُوَّةَ اِلَّا بِاللّٰهِ ۚ اِنْ تَرَنِ اَنَا اَقَلَّ

14. ಅರ್ಥಾತ್- ಅಲ್ಲಾಹನಿಚ್ಛೆಯಂತೆಯೇ ಎಲ್ಲವೂ ನಡೆಯುವುದು. ನನ್ನ ಅಥವಾ ಇತರರ ಸಾಧನೆಯೇನೂ ಇದರಲ್ಲಿಲ್ಲ. ಒಂದು ವೇಳೆ ನಮ್ಮ ಅಧಿಕಾರ ಎಲ್ಲಾದರೂ ನಡೆಯುವುದಿದ್ದರೆ ಅದೂ ಅಲ್ಲಾಹನ ಅನುಗ್ರಹ ಮತ್ತು ಸೌಭಾಗ್ಯದಿಂದಾಗಿಯೇ ಇದೆ.

ಅಲ್ಲಾಹನ ಹೊರತು ಇನ್ನಾವ ಶಕ್ತಿಯೂ ಇಲ್ಲ) ಎಂದೇಕೆ ಹೊರಡಲಿಲ್ಲ? ನಿನಗೆ ನಾನು ಸೊತ್ತು ಮತ್ತು ಸಂತತಿಗಳಲ್ಲಿ ನಿನಗಿಂತ ಕೀಳಾಗಿ ಕಾಣಿಸುತ್ತಿದ್ದರೆ-

مِنْكَ مَالًا وَّوَلَدًا ۝٣٩

40. ನನ್ನ ಪ್ರಭು ನನಗೆ ನಿನ್ನ ತೋಟಕ್ಕಿಂತ ಉತ್ತಮವಾದುದನ್ನು ದಯಪಾಲಿಸಲೂಬಹುದು ಮತ್ತು ನಿನ್ನ ತೋಟದ ಮೇಲೆ ಆಕಾಶದಿಂದ ಯಾವುದಾದರೂ ವಿಪತ್ತನ್ನು ಕಳುಹಿಸಿ ಅದನ್ನು ಬರಡು ಬಯಲಾಗಿಸಿ ಬಿಡಲೂ ಬಹುದು-

فَعَسٰى رَبِّيْٓ اَنْ يُّؤْتِيَنِ خَيْرًا مِّنْ جَنَّتِكَ
وَيُرْسِلَ عَلَيْهَا حُسْبَانًا مِّنَ السَّمَآءِ
فَتُصْبِحَ صَعِيْدًا زَلَقًا ۝٤٠

41. ಅಥವಾ ಅದರ ನೀರು ನೆಲದೊಳಕ್ಕೆ ಇಂಗಿ ಹೋಗಿ ನೀನು ಅದನ್ನು ಯಾವ ರೀತಿಯಿಂದಲೂ ಹೊರತರಲಾರದಂತೆ ಆಗಬಹುದು."

اَوْ يُصْبِحَ مَآؤُهَا غَوْرًا فَلَنْ تَسْتَطِيْعَ
لَهٗ طَلَبًا ۝٤١

42. ಕೊನೆಗೆ ಅವನ ಸಂಪೂರ್ಣ ಫಲಗಳು ನಾಶವಾದುವು. ಅವನು ತನ್ನ ದ್ರಾಕ್ಷಾ ತೋಟಗಳು ತಡಿಕೆಗಳ ಮೇಲೆ ಮಗುಚಿ ಬಿದ್ದಿರುವುದನ್ನು ಕಂಡು, ತಾನು ಹೂಡಿದ ಬಂಡವಾಳಕ್ಕಾಗಿ ಗೋಳಾಡುತ್ತ, "ಅಕಟ! ನಾನು ನನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯನ್ನಾಗಿಸದಿರುತ್ತಿದ್ದರೆ!" ಎನ್ನತೊಡಗಿದನು.

وَاُحِيْطَ بِثَمَرِهٖ فَاَصْبَحَ يُقَلِّبُ كَفَّيْهِ
عَلٰى مَآ اَنْفَقَ فِيْهَا وَهِيَ خَاوِيَةٌ عَلٰى
عُرُوْشِهَا وَيَقُوْلُ يٰلَيْتَنِيْ لَمْ اُشْرِكْ
بِرَبِّيْٓ اَحَدًا ۝٤٢

43. ಅಲ್ಲಾಹನ ಹೊರತು ಅವನಿಗೆ ಸಹಾಯ ಮಾಡತಕ್ಕ ಯಾವ ತಂಡವೂ ಅವನ ಬಳಿ ಇಲ್ಲದಾಯಿತು ಮತ್ತು ಸ್ವತಃ ಅವನೂ ಈ ಆಪತ್ತನ್ನು ಎದುರಿಸಲಾರದಾದನು.

وَلَمْ تَكُنْ لَّهٗ فِئَةٌ يَّنْصُرُوْنَهٗ مِنْ دُوْنِ
اللّٰهِ وَمَا كَانَ مُنْتَصِرًا ۝٤٣

44. ಕಾರ್ಯ ಸಾಧನೆಯ ಸಕಲ ಅಧಿಕಾರಗಳು ಸತ್ಯಪೂರ್ಣವಾದ ಅಲ್ಲಾಹನಿಗೆ ಮಾತ್ರವೆಂದು ಆಗ ತಿಳಿಯಿತು. ಅವನು ನೀಡುವ ಪಾರಿತೋಷಕವೇ ಅತ್ಯುತ್ತಮವಾದುದು. ಅವನು ತೋರುವ ಅಂತಿಮ ಪರಿಣಾಮವೇ ಶುಭಕರವಾದುದು.

هُنَالِكَ الْوَلَايَةُ لِلّٰهِ الْحَقِّ ۗ هُوَ خَيْرٌ
ثَوَابًا وَّخَيْرٌ عُقْبًا ۝٤٤

45. ಓ ಪೈಗಂಬರರೇ, ಇವರಿಗೆ ಇಹಜೀವನದ ವಾಸ್ತವಿಕತೆಯನ್ನು ಈ ಉಪಮೆಯ ಮೂಲಕ ವಿವರಿಸಿರಿ; ನಾವಿಂದು ಆಕಾಶದಿಂದ ನೀರನ್ನು ಸುರಿಸಿದಾಗ ಭೂಮಿಯ ಸಸ್ಯ ಸೃಷ್ಟಿಯು ದಟ್ಟವಾಗಿ ಬೆಳೆಯಿತು. ನಾಳೆ ಆ ಸಸ್ಯಗಳೇ, ಗಾಳಿಯು ಹಾರಿಸುತ್ತಾ ಹೋಗುವಂಥ ಹೊಟ್ಟಾಗಿ ಹೋದುವು. ಅಲ್ಲಾಹನು ಸಕಲ ವಸ್ತುಗಳ ಮೇಲೆ ಸಾಮರ್ಥ್ಯವುಳ್ಳವನಾಗಿರುತ್ತಾನೆ.

وَاضْرِبْ لَهُمْ مَّثَلَ الْحَيٰوةِ الدُّنْيَا كَمَآءٍ
اَنْزَلْنٰهُ مِنَ السَّمَآءِ فَاخْتَلَطَ بِهٖ نَبَاتُ
الْاَرْضِ فَاَصْبَحَ هَشِيْمًا تَذْرُوْهُ الرِّيٰحُ ۗ
وَكَانَ اللّٰهُ عَلٰى كُلِّ شَيْءٍ مُّقْتَدِرًا ۝٤٥

46. ಈ ಸೊತ್ತು ಮತ್ತು ಈ ಸಂತತಿಗಳು ಕೇವಲ ಲೌಕಿಕ ಜೀವನದ ಕ್ಷಣಿಕ ಸೊಬಗು ಮಾತ್ರ. ವಾಸ್ತವದಲ್ಲಿ ಉಳಿಯುವ ಪುಣ್ಯ ಕಾರ್ಯಗಳೇ ನಿಮ್ಮ ಪ್ರಭುವಿನ ಬಳಿ ಪರಿಣಾಮದ ದೃಷ್ಟಿಯಿಂದ ಶ್ರೇಷ್ಠವಾಗಿರುತ್ತವೆ. ಅವುಗಳ ಮೇಲೆಯೇ ಉತ್ತಮ ನಿರೀಕ್ಷೆ ಗಳನ್ನಿರಿಸಿ ಕೊಳ್ಳಬಹುದು.

ٱلْمَالُ وَٱلْبَنُونَ زِينَةُ ٱلْحَيَوٰةِ ٱلدُّنْيَا ۖ
وَٱلْبَٰقِيَٰتُ ٱلصَّٰلِحَٰتُ خَيْرٌ عِندَ رَبِّكَ
ثَوَابًا وَخَيْرٌ أَمَلًا ٤٦

47. ನಾವು ಪರ್ವತಗಳಿಗೆ ಚಲನೆ ಕೊಡುವ ಆ ದಿನದ ಬಗ್ಗೆ ಚಿಂತೆ ಇರಬೇಕು. ಅಂದು ನೀವು ಭೂಮಿಯನ್ನು ಸಂಪೂರ್ಣ ನಗ್ನವಾಗಿ ಕಾಣುವಿರಿ ಮತ್ತು ನಾವು ಸಕಲ ಮಾನವರನ್ನು (ಹಿಂದಿನ ಮತ್ತು ಮುಂದಿನ ಕಾಲಗಳ) ಒಬ್ಬನೂ ಬಿಟ್ಟು ಹೋಗದಂತೆ ಸುತ್ತುಗಟ್ಟಿ ಒಟ್ಟು ಗೂಡಿಸುವೆವು.

وَيَوْمَ نُسَيِّرُ ٱلْجِبَالَ وَتَرَى ٱلْأَرْضَ
بَارِزَةً وَحَشَرْنَٰهُمْ فَلَمْ نُغَادِرْ
مِنْهُمْ أَحَدًا ٤٧

48. ಸರ್ವರೂ ನಿಮ್ಮ ಪ್ರಭುವಿನ ಸನ್ನಿಧಿಯಲ್ಲಿ ಸಾಲುಸಾಲಾಗಿ ತರಲ್ಪಡುವರು. ಇದೋ, ನಾವು ನಿಮ್ಮನ್ನು ಪ್ರಥಮ ಬಾರಿ ಸೃಷ್ಟಿಸಿದ್ದಂತೆಯೇ ನೀವೆಲ್ಲಾ ನಮ್ಮ ಬಳಿಗೆ ಬಂದು ಬಿಟ್ಟಿರಲ್ಲಾ! ನಾವು ನಿಮಗಾಗಿ ಯಾವುದೇ ವಾಗ್ದಾನದ ಸಮಯವನ್ನು ನಿಶ್ಚಯಿ ಸಿಯೇ ಇಲ್ಲವೆಂದು ನೀವು ತಿಳಿದು ಕೊಂಡಿದ್ದಿರಿ-

وَعُرِضُوا۟ عَلَىٰ رَبِّكَ صَفًّا لَّقَدْ جِئْتُمُونَا
كَمَا خَلَقْنَٰكُمْ أَوَّلَ مَرَّةٍۭ ۚ بَلْ زَعَمْتُمْ
أَلَّن نَّجْعَلَ لَكُم مَّوْعِدًا ٤٨

49. ಮತ್ತು ಕರ್ಮಪತ್ರವು ಮುಂದಿರಿಸಲ್ಪಡುವುದು. ಆಗ ಅಪರಾಧಿ ಗಳು ತಮ್ಮ ಜೀವನ ಗ್ರಂಥದಲ್ಲಿ ಅಡಕವಾಗಿರುವುದರ ಬಗ್ಗೆ ಭಯಭೀತರಾಗಿ, "ಅಯ್ಯೋ ನಮ್ಮ ದುರ್ಗತಿಯೇ, ಇದೆಂತಹ ಗ್ರಂಥ! ನಮ್ಮ ಯಾವುದೇ ಚಿಕ್ಕ ಹಾಗೂ ದೊಡ್ಡ ಕೃತ್ಯವು ಇದರಲ್ಲಿ ಲಿಖಿತಗೊಳ್ಳದೆ ಬಿಟ್ಟು ಹೋಗಿಲ್ಲವಲ್ಲಾ" ಎಂದು ಹೇಳುತ್ತಿರುವುದನ್ನು ನೀವು ಕಾಣುವಿರಿ. ಅವರು ಏನೆಲ್ಲ ಮಾಡಿ ದ್ದರೋ ಅವೆಲ್ಲವನ್ನೂ ತಮ್ಮ ಮುಂದೆ ಕಾಣುವರು ಮತ್ತು ನಿಮ್ಮ ಪ್ರಭು ಯಾರ ಮೇಲೂ ಕಿಂಚಿತ್ತೂ ಅಕ್ರಮವೆಸಗಲಾರನು.

وَوُضِعَ ٱلْكِتَٰبُ فَتَرَى ٱلْمُجْرِمِينَ
مُشْفِقِينَ مِمَّا فِيهِ وَيَقُولُونَ يَٰوَيْلَتَنَا
مَالِ هَٰذَا ٱلْكِتَٰبِ لَا يُغَادِرُ صَغِيرَةً وَلَا
كَبِيرَةً إِلَّآ أَحْصَىٰهَا ۚ وَوَجَدُوا۟ مَا عَمِلُوا۟
حَاضِرًا ۗ وَلَا يَظْلِمُ رَبُّكَ أَحَدًا ٤٩

50. ಸ್ಮರಿಸಿರಿ! ನಾವು ದೇವಚರರೊಡನೆ, ಆದಮರಿಗೆ 'ಸಾಷ್ಟಾಂಗ' ಎರಗಿರಿ ಎಂದು ಹೇಳಿದಾಗ ಅವರು ಎರಗಿದರು. ಆದರೆ ಇಬ್‌ಲೀಸನು ಎರಗಲಿಲ್ಲ. ಅವನು 'ಯಕ್ಷ'ಗಳಲ್ಲಾಗಿದ್ದನು. ಆದುದ ರಿಂದ ಅವನು ತನ್ನ ಪ್ರಭುವಿನ ಆಜ್ಞಾನುಸರಣೆಯಿಂದ ಸರಿದು ಬಿಟ್ಟನು[15] ಇನ್ನೇನು, ನೀವು ನನ್ನನ್ನು ಬಿಟ್ಟು ಅವನನ್ನೂ

وَإِذْ قُلْنَا لِلْمَلَٰٓئِكَةِ ٱسْجُدُوا۟ لِءَادَمَ فَسَجَدُوٓا۟
إِلَّآ إِبْلِيسَ كَانَ مِنَ ٱلْجِنِّ فَفَسَقَ عَنْ
أَمْرِ رَبِّهِۦٓ ۗ أَفَتَتَّخِذُونَهُۥ وَذُرِّيَّتَهُۥٓ أَوْلِيَآءَ
مِن دُونِى وَهُمْ لَكُمْ عَدُوٌّۢ ۚ بِئْسَ

15. ಅರ್ಥಾತ್- ಇಬ್‌ಲೀಸ್ ದೇವಚರರಲ್ಲಾಗಿರಲಿಲ್ಲ. ಅವನು ಜಿನ್ನ್‌ಗಳಲ್ಲಾಗಿದ್ದನು. ಆದ್ದರಿಂದ ಅನುಸರಣೆಯಿಂದ ದೂರಸರಿಯುವುದು ಅವನಿಗೆ ಸಾಧ್ಯವಾಯಿತು. ದೇವಚರರಲ್ಲಾಗಿದ್ದರೆ ಅವನು ಆಜ್ಞೋಲ್ಲಂಘನೆ ಮಾಡಲು ಸಾಧ್ಯವೇ ಇರಲಿಲ್ಲ. ಜಿನ್ನ್ ಮಾನವರಂತೆಯೇ

لِلظّٰلِمِينَ بَدَلًا ﴿٥٠﴾

ಅವನ ಸಂತಾನವನ್ನೂ ನಿಮ್ಮ ರಕ್ಷಕ ಮಿತ್ರರಾಗಿ ಮಾಡುತ್ತೀರಾ? ವಸ್ತುತಃ ಅವರು ನಿಮ್ಮ ಶತ್ರುಗಳಾಗಿರುತ್ತಾರೆ. ಅಕ್ರಮಿಗಳು ಸ್ವೀಕರಿಸುತ್ತಿರುವ ಬದಲಿಯು ಅತ್ಯಂತ ಕೆಟ್ಟದ್ದಾಗಿರುತ್ತದೆ.

مَآ أَشْهَدتُّهُمْ خَلْقَ السَّمٰوٰتِ وَالْأَرْضِ وَلَا خَلْقَ أَنفُسِهِمْ وَمَا كُنتُ مُتَّخِذَ الْمُضِلِّينَ عَضُدًا ﴿٥١﴾

51. ನಾನು ಆಕಾಶಗಳನ್ನೂ ಭೂಮಿಯನ್ನೂ ಸೃಷ್ಟಿಸುವಾಗ ಅವರನ್ನು ಕರೆದಿರಲಿಲ್ಲ. ಸ್ವತಃ ಅವರ ಸೃಷ್ಟಿಯಲ್ಲೂ ನಾನು ಅವರನ್ನು ಸಹಭಾಗಿಗಳಾಗಿಸಿರಲಿಲ್ಲ. ದಾರಿಗೆಡಿಸುವವರನ್ನು ನನ್ನ ಸಹಾಯಕರನ್ನಾಗಿ ಮಾಡುವುದು ನನ್ನ ಕ್ರಮವಲ್ಲ.[16]

وَيَوْمَ يَقُولُ نَادُوا شُرَكَآءِيَ الَّذِينَ زَعَمْتُمْ فَدَعَوْهُمْ فَلَمْ يَسْتَجِيبُوا لَهُمْ وَجَعَلْنَا بَيْنَهُم مَّوْبِقًا ﴿٥٢﴾

52. ಇವರ ಪ್ರಭು ಇವರೊಡನೆ "ನೀವು ನನ್ನ ಸಹಭಾಗಿಗಳೆಂದು ಭಾವಿಸಿ ಕೊಂಡಿದ್ದವರನ್ನು ಕೂಗಿ ಕರೆಯಿರಿ" ಎಂದು ಹೇಳುವಂದು ಇವರೇನು ಮಾಡುವರು? ಇವರು ಅವರನ್ನು ಕರೆಯುವರು. ಆದರೆ ಅವರು ಇವರ ಸಹಾಯಕ್ಕೆ ಬರಲಾರರು ಮತ್ತು ನಾವು ಅವರ ನಡುವೆ ಸಮನಾಗಿ ಒಂದೇ ವಿನಾಶಕೂಪವನ್ನು ಉಂಟು ಮಾಡುವೆವು.

وَرَءَا الْمُجْرِمُونَ النَّارَ فَظَنُّوٓا أَنَّهُم مُّوَاقِعُوهَا وَلَمْ يَجِدُوا عَنْهَا مَصْرِفًا ﴿٥٣﴾

53. ಅಂದು ಎಲ್ಲ ಅಪರಾಧಿಗಳೂ ಅಗ್ನಿಯನ್ನು ಕಾಣುವರು ಮತ್ತು ಇನ್ನು ನಮಗೆ ಇದರಲ್ಲೇ ಬೀಳಬೇಕಾಗಿದೆಯೆಂದು ತಿಳಿದು ಕೊಳ್ಳುವರು ಮತ್ತು ಅವರು ಅದರಿಂದ ಪಾರಾಗಲು ಯಾವ ಅಭಯ ಸ್ಥಾನವನ್ನೂ ಪಡೆಯಲಾರರು.

وَلَقَدْ صَرَّفْنَا فِي هٰذَا الْقُرْءَانِ لِلنَّاسِ مِن كُلِّ مَثَلٍ وَكَانَ الْإِنسَانُ أَكْثَرَ شَيْءٍ جَدَلًا ﴿٥٤﴾

54. ನಾವು ಈ ಕುರ್‌ಆನಿನಲ್ಲಿ ಜನರಿಗೆ ತರತರಹದ ಉಪಮೆಗಳ ಮೂಲಕ ಬೋಧಿಸಿದೆವು. ಆದರೆ ಮಾನವನು ಮಹಾ ಜಗಳಗಂಟನಾಗಿದ್ದಾನೆ.

وَمَا مَنَعَ النَّاسَ أَن يُؤْمِنُوٓا إِذْ جَآءَهُمُ الْهُدَىٰ وَيَسْتَغْفِرُوا رَبَّهُمْ إِلَّآ أَن تَأْتِيَهُمْ سُنَّةُ الْأَوَّلِينَ أَوْ يَأْتِيَهُمُ الْعَذَابُ قُبُلًا ﴿٥٥﴾

55. ಅವರ ಮುಂದೆ ಮಾರ್ಗದರ್ಶನ ಬಂದಾಗ ಅದನ್ನು ಸ್ವೀಕರಿಸದಂತೆಯೂ, ತಮ್ಮ ಪ್ರಭುವಿನೊಡನೆ ಕ್ಷಮಾಯಾಚನೆ ಮಾಡದಂತೆಯೂ ಅವರನ್ನು ತಡೆದುದಾವುದು? ಅದು ಗತಕಾಲದ ಜನಾಂಗಗಳ ಮೇಲೆ ಸಂಭವಿಸಿದುದೆಲ್ಲ ಇವರ ಮೇಲೂ ಸಂಭವಿಸಬೇಕೆಂಬ ಅಥವಾ ಇವರು ಆ ಯಾತನೆ ಬರುತ್ತಿರುವುದನ್ನು ಕಣ್ಣಾರೆ ಕಾಣಬೇಕೆಂಬ ನಿರೀಕ್ಷೆಯಲ್ಲದೆ ಇನ್ನೇನೂ ಅಲ್ಲ.

ಸ್ವಾತಂತ್ರ್ಯ ನೀಡಲ್ಪಟ್ಟ ಜೀವಿಗಳಾಗಿವೆ. ಅವುಗಳನ್ನು ಅಜನ್ಮ ಆಜ್ಞಾನುಸಾರಿಗಳನ್ನಾಗಿ ಮಾಡಲಾಗಿಲ್ಲ. ಸತ್ಯವಿಶ್ವಾಸ, ಸತ್ಯನಿಷೇಧ ಹಾಗೂ ಅನುಸರಣೆ ಮತ್ತು ಪಾಪಗಳ ಪೈಕಿ ಯಾವುದನ್ನು ಬೇಕಾದರೂ ನೆಚ್ಚಿಕೊಳ್ಳುವ ಅರ್ಹತೆಯನ್ನು ಅವುಗಳಿಗೆ ನೀಡಲಾಗಿದೆ.

16. ಅರ್ಥಾತ್- ಈ ಪಿಶಾಚಿಗಳು ನಿಮ್ಮ ಅನುಸರಣೆ ಮತ್ತು ದಾಸ್ಯಕ್ಕೆ ಅರ್ಹರಾದುದು ಹೇಗೆ? ಸೃಷ್ಟಿಕರ್ತ ಮಾತ್ರ ದಾಸ್ಯಕ್ಕೆ ಅರ್ಹನಾಗಬಲ್ಲ. ಪಿಶಾಚಿಗಳು ಭೂಮಿ-ಆಕಾಶಗಳ ಸೃಷ್ಟಿಯಲ್ಲಿ ಭಾಗೀದಾರರಾಗುವುದಂತಿರಲಿ, ಅವುಗಳು ಸ್ವತಃ ಸೃಷ್ಟಿಗಳಾಗಿವೆ.

56. ನಾವು ಸಂದೇಶವಾಹಕರನ್ನು ಸುವಾರ್ತೆ ಮತ್ತು ಎಚ್ಚರಿಕೆ ಕೊಡಲಿಕ್ಕಾಗಿಯೇ ಹೊರತು ಇನ್ನಾವ ಉದ್ದೇಶಕ್ಕಾಗಿಯೂ ಕಳುಹಿಸುವುದಿಲ್ಲ. ಆದರೆ ಸತ್ಯನಿಷೇಧಿಗಳು ಮಿಥ್ಯದ ಅಸ್ತ್ರದೊಂದಿಗೆ ಸತ್ಯವನ್ನು ಸದೆಬಡಿಯಲು ಪ್ರಯತ್ನಿಸುತ್ತಾರೆ ಮತ್ತು ಅವರು ನನ್ನ ವಚನಗಳನ್ನೂ ಅವರಿಗೆ ಕೊಡಲ್ಪಟ್ಟಿದ್ದ ಎಚ್ಚರಿಕೆಗಳನ್ನೂ ಪ್ರಹಸನವಾಗಿ ಮಾಡಿಕೊಂಡಿದ್ದಾರೆ.

وَمَا نُرْسِلُ الْمُرْسَلِيْنَ اِلَّا مُبَشِّرِيْنَ
وَمُنْذِرِيْنَ ۚ وَيُجَادِلُ الَّذِيْنَ كَفَرُوْا
بِالْبَاطِلِ لِيُدْحِضُوْا بِهِ الْحَقَّ وَاتَّخَذُوْٓا
اٰيٰتِيْ وَمَآ اُنْذِرُوْا هُزُوًا ﴿٥٦﴾

57. ತನ್ನ ಪ್ರಭುವಿನ ವಚನಗಳನ್ನು ಓದಿ ಹೇಳಿ ಉಪದೇಶಿಸಿದಾಗ ಯಾರು ಅದರಿಂದ ವಿಮುಖನಾಗುವನೋ ಹಾಗೂ ತಾನು ತನ್ನ ಸ್ವಂತ ಕೈಗಳಿಂದ ತನಗಾಗಿ ಮಾಡಿಕಳುಹಿಸಿದ ಕರ್ಮಗಳ ಕೆಟ್ಟ ಪ್ರತಿಫಲವನ್ನು ಮರೆತು ಬಿಡುವನೋ ಅವನಿಗಿಂತ ದೊಡ್ಡ ಅಕ್ರಮಿ ಇನ್ನಾರಿರಬಹುದು? (ಈ ಧೋರಣೆಯನ್ನಿರಿಸಿಕೊಂಡಿರುವ) ಅವರ ಹೃದಯಗಳ ಮೇಲೆ ನಾವು ತೆರೆ ಎಳೆದು ಬಿಟ್ಟಿದ್ದೇವೆ. ಅವು ಅವರಿಗೆ ಕುರ್‌ಆನನ್ನು ಗ್ರಹಿಸಲು ಬಿಡುವುದಿಲ್ಲ ಮತ್ತು ನಾವು ಅವರ ಕಿವಿಗಳಲ್ಲಿ ಕಿವುಡುತನವನ್ನುಂಟು ಮಾಡಿ ಬಿಟ್ಟಿದ್ದೇವೆ. ನೀವು ಅವರನ್ನು ಸನ್ಮಾರ್ಗದತ್ತ ಎಷ್ಟು ಕರೆದರೂ ಈ ಅವಸ್ಥೆಯಲ್ಲಿ ಅವರು ಎಂದೆಂದಿಗೂ ಸನ್ಮಾರ್ಗ ಪಡೆಯಲಾರರು.

وَمَنْ اَظْلَمُ مِمَّنْ ذُكِّرَ بِاٰيٰتِ رَبِّهٖ
فَاَعْرَضَ عَنْهَا وَنَسِيَ مَا قَدَّمَتْ يَدٰهُ ؕ
اِنَّا جَعَلْنَا عَلٰى قُلُوْبِهِمْ اَكِنَّةً اَنْ
يَّفْقَهُوْهُ وَفِيْٓ اٰذَانِهِمْ وَقْرًا ؕ وَاِنْ تَدْعُهُمْ
اِلَى الْهُدٰى فَلَنْ يَّهْتَدُوْٓا اِذًا اَبَدًا ﴿٥٧﴾

58. ನಿಮ್ಮ ಪ್ರಭು ಮಹಾಕ್ಷಮಾಶೀಲನೂ ಕರುಣಾನಿಧಿಯೂ ಆಗಿರುತ್ತಾನೆ. ಅವನು ಇವರ ಕರ್ಮಗಳಿಗಾಗಿ ಇವರನ್ನು ಹಿಡಿಯಲಿಚ್ಛಿಸುತ್ತಿದ್ದರೆ ಬೇಗನೆ ಯಾತನೆ ಕಳುಹಿಸಿ ಬಿಡುತ್ತಿದ್ದನು. ಆದರೆ ಇವರಿಗಾಗಿ ವಾಗ್ದಾನವೀಯಲಾಗಿರುವ ಒಂದು ಸಮಯ ನಿಶ್ಚಿತವಿದೆ ಮತ್ತು ಅದನ್ನು ತಪ್ಪಿಸಿ ಓಡಿಹೋಗುವ ಯಾವ ದಾರಿಯನ್ನೂ ಇವರು ಕಾಣಲಾರರು.

وَرَبُّكَ الْغَفُوْرُ ذُو الرَّحْمَةِ ؕ لَوْ
يُؤَاخِذُهُمْ بِمَا كَسَبُوْا لَعَجَّلَ لَهُمُ
الْعَذَابَ ؕ بَلْ لَّهُمْ مَّوْعِدٌ لَّنْ يَّجِدُوْا
مِنْ دُوْنِهٖ مَوْئِلًا ﴿٥٨﴾

59. ಈ ಯಾತನಾಗ್ರಸ್ತ ನಾಡುಗಳು ನಿಮ್ಮ ಮುಂದೆಯೇ ಇವೆ. ಅವರು ಅಕ್ರಮವೆಸಗಿದಾಗ ನಾವು ಅವರನ್ನು ನಾಶಗೊಳಿಸಿದೆವು ಮತ್ತು ಅವುಗಳಲ್ಲಿ ಪ್ರತಿಯೊಂದರ ವಿನಾಶಕ್ಕಾಗಿ ನಾವು ಸಮಯವನ್ನು ನಿಶ್ಚಯಿಸಿಟ್ಟಿದ್ದೆವು.

وَتِلْكَ الْقُرٰٓى اَهْلَكْنٰهُمْ لَمَّا ظَلَمُوْا
وَجَعَلْنَا لِمَهْلِكِهِمْ مَّوْعِدًا ﴿٥٩﴾

60. (ಮೂಸಾರಿಗೆ ಸಂಭವಿಸಿದ ಘಟನೆಯನ್ನು ಹೇಳಿರಿ) ಮೂಸಾರವರು ತಮ್ಮ ಸೇವಕನೊಡನೆ, "ನಾನು ಎರಡು ನದಿಗಳ ಸಂಗಮ ಸ್ಥಾನವನ್ನು ತಲಪದೆ ನನ್ನ ಪ್ರಯಾಣವನ್ನು ನಿಲ್ಲಿಸಲಾರೆ.

وَاِذْ قَالَ مُوْسٰى لِفَتٰىهُ لَآ اَبْرَحُ حَتّٰٓى
اَبْلُغَ مَجْمَعَ الْبَحْرَيْنِ اَوْ اَمْضِيَ حُقُبًا ﴿٦٠﴾

ಅನ್ಯಥಾ ನಾನೊಂದು ದೀರ್ಘ ಕಾಲದ ವರೆಗೆ ನಡೆಯುತ್ತಲೇ ಇರುವೆನು"[17] ಎಂದರು.

61. ಆ ಪ್ರಕಾರ ಅವರು ಸಂಗಮ ಸ್ಥಾನಕ್ಕೆ ತಲುಪಿದಾಗ ತಮ್ಮ ಮೀನನ್ನು ಮರೆತು ಬಿಟ್ಟರು ಮತ್ತು ಅದು ಹೊರಟು ಅಲ್ಲೊಂದು ಸುರಂಗವಿತ್ತೋ ಎಂಬಂತೆ ನದಿಗೆ ಹೋಗಿ ಬಿಟ್ಟಿತು.

فَلَمَّا بَلَغَا مَجْمَعَ بَيْنِهِمَا نَسِيَا حُوتَهُمَا فَاتَّخَذَ سَبِيلَهُ فِي الْبَحْرِ سَرَبًا ﴿٦١﴾

62. ಮೂಸಾ ಮುಂದೆ ಸಾಗಿ ತಮ್ಮ ಸೇವಕನೊಡನೆ, "ನಮ್ಮ ಬೆಳಗಿನ ಉಪಾಹಾರ ನೀಡು. ಇಂದು ನಾವು ಪ್ರಯಾಣ ಮಾಡಿ ತುಂಬಾ ದಣಿದಿದ್ದೇವೆ" ಎಂದರು.

فَلَمَّا جَاوَزَا قَالَ لِفَتَاهُ آتِنَا غَدَاءَنَا لَقَدْ لَقِينَا مِن سَفَرِنَا هَٰذَا نَصَبًا ﴿٦٢﴾

63. ಆಗ ಸೇವಕನು, "ತಾವು ಕಂಡಿರಾ? ಇದೇನಾಯಿತು? ನಾವು ಆ ಶಿಲೆಯ ಬಳಿ ತಂಗಿದ್ದಾಗ ನಾನು ಮೀನನ್ನು ಮರೆತೇ ಬಿಟ್ಟಿದ್ದೆ. ನಾನು ತಮ್ಮೊಡನೆ ಅದರ ಪ್ರಸ್ತಾಪವೆತ್ತದ ರೀತಿಯಲ್ಲಿ ಶೈತಾನನು ನನ್ನನ್ನು ಮರೆವೆಗೀಡು ಮಾಡಿಬಿಟ್ಟನು. ಮೀನು ವಿಚಿತ್ರ ರೀತಿಯಿಂದ ಹೊರಟು ನದಿಯೊಳಗೆ ಸೇರಿಬಿಟ್ಟಿತು" ಎಂದನು.

قَالَ أَرَأَيْتَ إِذْ أَوَيْنَا إِلَى الصَّخْرَةِ فَإِنِّي نَسِيتُ الْحُوتَ وَمَا أَنسَانِيهُ إِلَّا الشَّيْطَانُ أَنْ أَذْكُرَهُ ۚ وَاتَّخَذَ سَبِيلَهُ فِي الْبَحْرِ عَجَبًا ﴿٦٣﴾

64. ಆಗ ಮೂಸಾ, "ನಾವು ಹುಡುಕುತ್ತಿದ್ದುದೂ ಅದನ್ನೇ"[18] ಎಂದರು. ಆ ಪ್ರಕಾರ ಅವರಿಬ್ಬರೂ ತಮ್ಮ ಪಾದ ಗುರುತುಗಳನ್ನನುಸರಿಸಿ ಹಿಂದಿರುಗಿದರು-

قَالَ ذَٰلِكَ مَا كُنَّا نَبْغِ ۚ فَارْتَدَّا عَلَىٰ آثَارِهِمَا قَصَصًا ﴿٦٤﴾

65. ಮತ್ತು ಅಲ್ಲಿ ಅವರು ನಮ್ಮ ದಾಸರ ಪೈಕಿ ಓರ್ವ ದಾಸನನ್ನು ಕಂಡರು. ನಾವು ಅವನಿಗೆ ನಮ್ಮ ಅನುಗ್ರಹ ಪ್ರದಾನ ಮಾಡಿದ್ದೆವು ಮತ್ತು ನಮ್ಮ ವತಿಯಿಂದ ಒಂದು ವಿಶಿಷ್ಟ ಜ್ಞಾನವನ್ನು ದಯಪಾಲಿಸಿದ್ದೆವು.[19]

فَوَجَدَا عَبْدًا مِّنْ عِبَادِنَا آتَيْنَاهُ رَحْمَةً مِّنْ عِندِنَا وَعَلَّمْنَاهُ مِن لَّدُنَّا عِلْمًا ﴿٦٥﴾

66. ಮೂಸಾ ಅವರೊಡನೆ, "ನಿಮಗೆ ಕಲಿಸಿ ಕೊಡಲಾಗಿರುವ

قَالَ لَهُ مُوسَىٰ هَلْ أَتَّبِعُكَ عَلَىٰ أَن

17. ಪ್ರವಾದಿ ಮೂಸಾ(ಅ) ಈ ಯಾತ್ರೆಯನ್ನು ಯಾವ ಕಾಲದಲ್ಲಿ ಕೈಗೊಂಡಿದ್ದರೆಂಬ ವಿಚಾರ ಯಾವುದೇ ನಂಬಲರ್ಹ ಮೂಲಗಳಿಂದ ತಿಳಿದು ಬರುವುದಿಲ್ಲ. ಎರಡು ನದಿಗಳ ಸಂಗಮದಲ್ಲಿ ಈ ಘಟನೆ ನಡೆದಿತ್ತು ಎಂದಿದೆ, ಆ ಎರಡು ನದಿಗಳು ಯಾವುವು ಎಂದೂ ತಿಳಿದು ಬರುವುದಿಲ್ಲ. ಆದರೆ ಘಟನೆಯ ಬಗ್ಗೆ ವಿವೇಚನೆ ನಡೆಸಿದಾಗ ಇದು ಪ್ರವಾದಿ ಮೂಸಾರ(ಅ) ಈಜಿಪ್ಟ್ ವಾಸ್ತವ್ಯದ ವೇಳೆ ನಡೆದಿತ್ತು ಎಂದು ತಿಳಿದು ಬರುತ್ತದೆ. ಆಗ ಫಿರ್‌ಔನ್ ಮತ್ತು ಅವರ ನಡುವೆ ಸಂಘರ್ಷ ನಡೆಯುತ್ತಿತ್ತು. ಎರಡು ನದಿಗಳೆಂದರೆ 'ಶ್ವೇತ ನೈಲ್' ಮತ್ತು 'ನೀಲ ನೈಲ್' ಎಂಬ ಎರಡು ಉಪನದಿಗಳು. ಅವುಗಳ ಸಂಗಮದಲ್ಲೇ ಇಂದಿನ 'ಖಾರ್ತೂಮ್' ನಗರವಿದೆ. ಈ ಊಹೆಗೆ ಕಾರಣವೇನೆಂಬುದನ್ನು ನಾವು ತಫ್ಹೀಮುಲ್ ಕುರ್‌ಆನ್, ಭಾಗ ಮೂರರಲ್ಲಿ ಬರುವ ಅಲ್ ಕಹ್ಫ್ ಅಧ್ಯಾಯದ ವ್ಯಾಖ್ಯಾನದಲ್ಲಿ ವಿವರಿಸಿದ್ದೇವೆ.

18. ಅರ್ಥಾತ್ ತಲಪಬೇಕಾದ ಗುರಿಯ ಬಗ್ಗೆ ನಮಗೆ ಇದೇ ಗುರುತನ್ನು ತಿಳಿಸಲಾಗಿತ್ತು.

19. ಆ ದಾಸನ ಹೆಸರು ನಂಬಲರ್ಹವಾದ ಎಲ್ಲ ಪ್ರವಾದಿ ವಚನಗಳಲ್ಲಿ 'ಖಿಝ್‌ರ್' ಎಂದಿದೆ.

ಸುಜ್ಞಾನವನ್ನು ನನಗೂ ಹೇಳಿ ಕೊಡುವಂತೆ ನಾನು ನಿಮ್ಮ ಸಂಗಡವಿರಲೇ?" ಎಂದು ಕೇಳಿದರು.

تُعَلِّمَنِ مِمَّا عُلِّمْتَ رُشْدًا ۝٦٦

67. ಆಗ ಅವರು, "ತಾವು ನನ್ನ ಸಂಗಡ ಸಹನೆಯಿಂದಿರಲಾರಿರಿ-

قَالَ إِنَّكَ لَنْ تَسْتَطِيعَ مَعِيَ صَبْرًا ۝٦٧

68. ಮತ್ತು ತಮಗೆ ಅರಿವಿಲ್ಲದಂತಹ ವಿಷಯದ ಬಗ್ಗೆ ತಾಳ್ಮೆ ವಹಿಸುವುದಾದರೂ ಹೇಗೆ?" ಎಂದರು.

وَكَيْفَ تَصْبِرُ عَلَىٰ مَا لَمْ تُحِطْ بِهِ خُبْرًا ۝٦٨

69. ಆಗ ಮೂಸಾ, 'ಇನ್ಶಾಅಲ್ಲಾಹ್ (ಅಲ್ಲಾಹನಿಚ್ಛಿಸಿದರೆ) ತಾವು ನನ್ನನ್ನು ಸಹನೆಯುಳ್ಳವನಾಗಿ ಕಾಣುವಿರಿ ಮತ್ತು ನಾನು ಯಾವ ವಿಷಯದಲ್ಲೂ ತಮ್ಮ ಆಜ್ಞೋಲ್ಲಂಘನೆ ಮಾಡಲಾರೆ" ಎಂದರು.

قَالَ سَتَجِدُنِي إِنْ شَاءَ اللَّهُ صَابِرًا وَلَا أَعْصِي لَكَ أَمْرًا ۝٦٩

70. ಆಗ ಅವರು, "ಸರಿ ತಾವು ನನ್ನ ಸಂಗಡ ನಡೆಯುವುದಿದ್ದರೆ, ನಾನೇ ಸ್ವತಃ ತಮಗೆ ಹೇಳುವ ವರೆಗೂ ತಾವು ನನ್ನೊಡನೆ ಯಾವ ವಿಷಯದಲ್ಲೂ ಪ್ರಶ್ನಿಸಬಾರದು" ಎಂದರು.

قَالَ فَإِنِ اتَّبَعْتَنِي فَلَا تَسْأَلْنِي عَنْ شَيْءٍ حَتَّىٰ أُحْدِثَ لَكَ مِنْهُ ذِكْرًا ۝٧٠

71. ಹಾಗೆ ಅವರಿಬ್ಬರೂ ಹೊರಟರು. ಕೊನೆಗೆ ಅವರು ಒಂದು ನಾವೆಯನ್ನೇರಿದರು. ಆಗ ಆ ವ್ಯಕ್ತಿಯು ಆ ನಾವೆಯಲ್ಲಿ ಒಂದು ಬಿರುಕನ್ನುಂಟು ಮಾಡಿಬಿಟ್ಟಿತು. ಮೂಸಾ ಹೇಳಿದರು, "ನೀವು ನಾವೆಯಲ್ಲಿರುವವರನ್ನೆಲ್ಲ ಮುಳುಗಿಸಿ ಬಿಡಬೇಕೆಂದು ಇದರಲ್ಲಿ ಬಿರುಕನ್ನುಂಟು ಮಾಡಿದಿರಾ? ನಿಜಕ್ಕೂ ನೀವೊಂದು ಕಠೋರ ಕಾರ್ಯವನ್ನೆಸಗಿದಿರಿ."

فَانْطَلَقَا حَتَّىٰ إِذَا رَكِبَا فِي السَّفِينَةِ خَرَقَهَا ۖ قَالَ أَخَرَقْتَهَا لِتُغْرِقَ أَهْلَهَا لَقَدْ جِئْتَ شَيْئًا إِمْرًا ۝٧١

72. ಆಗ ಅವರು, "ನೀವು ನನ್ನ ಸಂಗಡ ಸಹನೆಯಿಂದಿರಲಾರಿರೆಂದು ನಾನು ಹೇಳಿರಲಿಲ್ಲವೇ?" ಎಂದು ಕೇಳಿದರು.

قَالَ أَلَمْ أَقُلْ إِنَّكَ لَنْ تَسْتَطِيعَ مَعِيَ صَبْرًا ۝٧٢

73. ಆಗ ಮೂಸಾ, "ಪ್ರಮಾದವಶಾತ್ ಆಗಿ ಹೋದುದಕ್ಕಾಗಿ ನನ್ನನ್ನು ಹಿಡಿಯಬೇಡಿರಿ. ನನ್ನ ವಿಷಯದಲ್ಲಿ ನೀವು ಕಠಿಣವಾಗಿ ವರ್ತಿಸಬೇಡಿರಿ" ಎಂದರು.

قَالَ لَا تُؤَاخِذْنِي بِمَا نَسِيتُ وَلَا تُرْهِقْنِي مِنْ أَمْرِي عُسْرًا ۝٧٣

74. ಅನಂತರ ಅವರಿಬ್ಬರೂ ಮುಂದೆ ನಡೆದರು. ಕೊನೆಗೆ ಅವರಿಗೆ ಒಬ್ಬ ಬಾಲಕನು ಸಿಕ್ಕಿದನು. ಆ ವ್ಯಕ್ತಿ ಅವನನ್ನು ಕೊಂದು ಹಾಕಿತು. ಮೂಸಾ ಹೇಳಿದರು, "ನೀವು ಒಬ್ಬ ನಿರಪರಾಧಿಯ ಪ್ರಾಣಹಾನಿ ಮಾಡಿದಿರಾ? ವಸ್ತುತಃ ಅವನು ಯಾರನ್ನೂ ಕೊಲೆ ಮಾಡಿರಲಿಲ್ಲ. ನೀವು ಇದೊಂದು ದುಷ್ಕೃತ್ಯವೆಸಗಿದಿರಿ."

فَانْطَلَقَا حَتَّىٰ إِذَا لَقِيَا غُلَامًا فَقَتَلَهُ قَالَ أَقَتَلْتَ نَفْسًا زَكِيَّةً بِغَيْرِ نَفْسٍ ۖ لَقَدْ جِئْتَ شَيْئًا نُكْرًا ۝٧٤

75. *ಆಗ ಅವರು, "ನೀವು ನನ್ನ ಸಂಗಡ ಸಹನೆಯಿಂದಿರಲಾರಿರೆಂದು ನಾನು ನಿಮ್ಮೊಡನೆ ಹೇಳಿರಲಿಲ್ಲವೇ?" ಎಂದು ಕೇಳಿದರು.

قَالَ أَلَمْ أَقُلْ لَكَ إِنَّكَ لَنْ تَسْتَطِيعَ
مَعِيَ صَبْرًا ۝٧٥

76. (ಆಗ ಮೂಸಾ) "ಇನ್ನು ಮುಂದೆ ನಾನು ನಿಮ್ಮೊಡನೆ ಏನಾದರೂ ಕೇಳಿದರೆ ನೀವು ನನ್ನನ್ನು ಸಂಗಡ ಇಟ್ಟುಕೊಳ್ಳಬೇಡಿರಿ. ಈಗಂತೂ ನನ್ನ ಕಡೆಯಿಂದ ನಿಮಗೊಂದು ನೆಪ ಸಿಕ್ಕಿಬಿಟ್ಟಿತು" ಎಂದರು.

قَالَ إِنْ سَأَلْتُكَ عَنْ شَيْءٍ بَعْدَهَا
فَلَا تُصَاحِبْنِي ۖ قَدْ بَلَغْتَ مِنْ
لَدُنِّي عُذْرًا ۝٧٦

77. ಅನಂತರ ಅವರು ಮುಂದೆ ಸಾಗಿದರು. ಕೊನೆಗೆ ಒಂದು ಗ್ರಾಮಕ್ಕೆ ಬಂದರು ಮತ್ತು ಅಲ್ಲಿಯ ಜನರೊಡನೆ ಊಟ ಕೇಳಿದರು. ಆದರೆ ಅವರು ಇವರಿಬ್ಬರನ್ನೂ ಸತ್ಕರಿಸಲು ನಿರಾಕರಿಸಿ ದರು. ಅಲ್ಲಿ ಅವರೊಂದು ಗೋಡೆಯನ್ನು ಕಂಡರು. ಅದು ಬೀಳುವುದರಲ್ಲಿತ್ತು. ಆ ವ್ಯಕ್ತಿಯು ಆ ಗೋಡೆಯನ್ನು ಸರಿಪಡಿಸಿ ನಿಲ್ಲಿಸಿತು. ಮೂಸಾ ಹೇಳಿದರು, "ನೀವು ಇಚ್ಛಿಸುತ್ತಿದ್ದರೆ ಈ ಕೆಲಸದ ಮಜೂರಿ ಪಡೆದುಕೊಳ್ಳಬಹುದಿತ್ತು."

فَانْطَلَقَا ۗ حَتَّىٰ إِذَا أَتَيَا أَهْلَ قَرْيَةٍ
اسْتَطْعَمَا أَهْلَهَا فَأَبَوْا أَنْ يُضَيِّفُوهُمَا
فَوَجَدَا فِيهَا جِدَارًا يُرِيدُ أَنْ يَنْقَضَّ
فَأَقَامَهُ ۖ قَالَ لَوْ شِئْتَ لَتَّخَذْتَ
عَلَيْهِ أَجْرًا ۝٧٧

78. ಆಗ ಅವರು, "ನನ್ನ ಮತ್ತು ನಿಮ್ಮ ಸಹವಾಸ ಮುಗಿಯಿತು. ಇನ್ನು, ನಿಮ್ಮಿಂದ ಸಹಿಸಿ ಕೊಳ್ಳಲಾಗದಿದ್ದ ವಿಷಯಗಳ ವಾಸ್ತವಿಕತೆ ಯನ್ನು ನಾನು ನಿಮಗೆ ವಿವರಿಸುತ್ತೇನೆ-

قَالَ هَٰذَا فِرَاقُ بَيْنِي وَبَيْنِكَ ۚ
سَأُنَبِّئُكَ بِتَأْوِيلِ مَا لَمْ تَسْتَطِعْ
عَلَيْهِ صَبْرًا ۝٧٨

79. ನಾವೆಯ ಬಗ್ಗೆ ಹೇಳುವುದಾದರೆ, ಅದು ನದಿಯಲ್ಲಿ ದುಡಿದು ಹೊಟ್ಟೆ ಹೊರೆಯುತ್ತಿದ್ದ ಕೆಲವು ಬಡವರದ್ದಾಗಿತ್ತು. ನಾನು ಅದನ್ನು ದೋಷಪೂರ್ಣಗೊಳಿಸಬೇಕೆಂದು ಭಾವಿಸಿದೆ. ಏಕೆಂದರೆ ಮುಂದೆ, ಪ್ರತಿಯೊಂದು ನಾವೆಯನ್ನೂ ಬಲಾತ್ಕಾರವಾಗಿ ವಶಪಡಿಸಿ ಕೊಳ್ಳುವಂತಹ ಒಬ್ಬ ಅರಸನ ಪ್ರದೇಶವಿತ್ತು.

أَمَّا السَّفِينَةُ فَكَانَتْ لِمَسَاكِينَ
يَعْمَلُونَ فِي الْبَحْرِ فَأَرَدْتُ أَنْ أَعِيبَهَا
وَكَانَ وَرَاءَهُمْ مَلِكٌ يَأْخُذُ كُلَّ
سَفِينَةٍ غَصْبًا ۝٧٩

80. ಆ ಬಾಲಕನ ಬಗ್ಗೆ ಹೇಳುವುದಿದ್ದರೆ ಅವನ ಮಾತಾಪಿತರು ಸತ್ಯವಿಶ್ವಾಸಿಗಳಾಗಿದ್ದರು. ಆ ಬಾಲಕನು ತನ್ನ ಅತಿಕ್ರಮ ಹಾಗೂ ಸತ್ಯನಿಷೇಧ ನೀತಿಗಳಿಂದ ಅವರಿಗೆ ತೊಂದರೆ ಕೊಡುವನೆಂಬ ಆಶಂಕೆ ನಮಗಾಯಿತು.

وَأَمَّا الْغُلَامُ فَكَانَ أَبَوَاهُ مُؤْمِنَيْنِ
فَخَشِينَا أَنْ يُرْهِقَهُمَا طُغْيَانًا وَكُفْرًا ۝٨٠

81. ಆದುದರಿಂದ ಅವರ ಪ್ರಭು ಅವನ ಬದಲಿಗೆ ಚಾರಿತ್ರ್ಯದಲ್ಲಿ ಅವನಿಗಿಂತ ಉತ್ತಮನೂ ದಯಾದಾಕ್ಷಿಣ್ಯಗಳಲ್ಲಿ ನಿಕಟನೂ ಆದ ಸಂತತಿಯನ್ನು ಅವರಿಗೆ ದಯಪಾಲಿಸಲೆಂದು ಬಯಸಿದೆವು-

فَأَرَدْنَا أَنْ يُبْدِلَهُمَا رَبُّهُمَا خَيْرًا مِنْهُ
زَكَاةً وَأَقْرَبَ رُحْمًا ۝٨١

*ಇಲ್ಲಿಂದ **16**ನೆಯ ಕಾಂಡ ಆರಂಭ.

82. ಮತ್ತು ಆ ಗೋಡೆಯ ಬಗ್ಗೆ ಹೇಳುವುದಾದರೆ ಅದು ಈ ಪಟ್ಟಣದಲ್ಲಿರುವ ಇಬ್ಬರು ಅನಾಥ ಹುಡುಗರದ್ದಾಗಿದೆ. ಈ ಗೋಡೆಯ ಅಡಿಯಲ್ಲಿ ಆ ಮಕ್ಕಳಿಗಾಗಿ ಒಂದು ನಿಧಿ ಇದೆ ಮತ್ತು ಅವರ ತಂದೆ ಒಬ್ಬ ಸಜ್ಜನನಾಗಿದ್ದನು. ಆದುದರಿಂದ ಈ ಮಕ್ಕಳಿಬ್ಬರೂ ಪ್ರೌಢಾವಸ್ಥೆಗೆ ತಲಪಿ ತಮ್ಮ ನಿಧಿಯನ್ನು ಪಡೆಯಲೆಂದು ನಿಮ್ಮ ಪ್ರಭು ಬಯಸಿದನು. ಇದು ನಿಮ್ಮ ಪ್ರಭುವಿನ ಕೃಪೆಯ ನಿಮಿತ್ತ ಮಾಡಲಾಗಿರುತ್ತದೆ. ನಾನೇನೂ ನನ್ನ ಸ್ವಂತ ಅಧಿಕಾರದಿಂದ ಮಾಡಿದುದಲ್ಲ. ನೀವು ತಾಳ್ಮೆ ವಹಿಸದಿದ್ದ ವಿಷಯಗಳ ವಾಸ್ತವಿಕತೆ ಇದು."[20]

وَاَمَّا الْجِدَارُ فَكَانَ لِغُلٰمَيْنِ يَتِيْمَيْنِ
فِى الْمَدِيْنَةِ وَكَانَ تَحْتَهٗ كَنْزٌ لَّهُمَا
وَكَانَ اَبُوْهُمَا صَالِحًا ۚ فَاَرَادَ رَبُّكَ
اَنْ يَّبْلُغَاۤ اَشُدَّهُمَا وَيَسْتَخْرِجَا كَنْزَهُمَا ۖ
رَحْمَةً مِّنْ رَّبِّكَ ۚ وَمَا فَعَلْتُهٗ عَنْ اَمْرِىْ ۗ
ذٰلِكَ تَاْوِيْلُ مَا لَمْ تَسْطِعْ عَّلَيْهِ صَبْرًا ﴿٨٢﴾ ع

83. ಓ ಪೈಗಂಬರರೇ, ಇವರು ನಿಮ್ಮೊಡನೆ 'ದುಲ್‌ಕರ್ನೈನ್'ರ ಕುರಿತು ಪ್ರಶ್ನಿಸುತ್ತಾರೆ. ಅವರ ಕುರಿತು ಕೆಲವು ವಿಷಯಗಳನ್ನು ನಿಮಗೆ ತಿಳಿಸುತ್ತೇನೆಂದು ಇವರೊಡನೆ ಹೇಳಿರಿ.

وَيَسْـَٔلُوْنَكَ عَنْ ذِى الْقَرْنَيْنِ ؕ قُلْ
سَاَتْلُوْا عَلَيْكُمْ مِّنْهُ ذِكْرًا ﴿٨٣﴾

84. ನಾವು ಅವರಿಗೆ ಭೂಮಿಯಲ್ಲಿ ಪ್ರಭುತ್ವವನ್ನು ದಯಪಾಲಿಸಿದ್ದೆವು ಮತ್ತು ಅವರಿಗೆ ಎಲ್ಲಾ ತರದ ಸಾಧನಾನುಕೂಲಗಳನ್ನು ನೀಡಿದ್ದೆವು.

اِنَّا مَكَّنَّا لَهٗ فِى الْاَرْضِ وَاٰتَيْنٰهُ مِنْ
كُلِّ شَىْءٍ سَبَبًا ﴿٨٤﴾

85. ಅವರು (ಮೊದಲು ಪಶ್ಚಿಮ ದಿಕ್ಕಿಗೆ ಒಂದು ದಂಡಯಾತ್ರೆಯ) ಸಿದ್ಧತೆ ಮಾಡಿದರು.

فَاَتْبَعَ سَبَبًا ﴿٨٥﴾

86. ಕೊನೆಗೆ ಅವರು ಸೂರ್ಯನು ಅಸ್ತಮಿಸುವಲ್ಲಿಗೆ ತಲುಪಿದಾಗ[21] ಸೂರ್ಯನು ಕಪ್ಪು ನೀರಿನಲ್ಲಿ ಮುಳುಗುತ್ತಿರುವುದಾಗಿ[22] ಕಂಡರು.

حَتّٰۤى اِذَا بَلَغَ مَغْرِبَ الشَّمْسِ وَجَدَهَا
تَغْرُبُ فِىْ عَيْنٍ حَمِئَةٍ وَّوَجَدَ عِنْدَهَا

20. ಹ. ಖಿಝ್ರ್ ಮಾಡಿದ ಮೂರು ಕೆಲಸಗಳು ಅಲ್ಲಾಹನ ಆಜ್ಞೆಯಿಂದಲೇ ಆಗಿದ್ದುವು ಎಂಬುದು ಈ ಘಟನೆಯಿಂದ ಸ್ಪಷ್ಟವಾಗುತ್ತದೆ. ಅದರ ಜತೆಗೆ ಅವರು ಮಾಡಿದ ಮೊದಲಿನೆರಡು ಕೆಲಸಗಳು, ಅಲ್ಲಾಹನು ಕಳುಹಿಸಿರುವ ಶರೀಅತ್‌ನಲ್ಲಿ ಯಾವ ಮಾನವನಿಗೂ ಅನುಮತಿಸಲಾಗದ ವಿಷಯಗಳೆಂದೂ ವ್ಯಕ್ತವಾಗುತ್ತದೆ. ಯಾರದಾದರೂ ಒಡೆತನದಲ್ಲಿರುವ ದೋಣಿಯನ್ನು ಮುಂದೆ ಅದನ್ನು ಅಕ್ರಮಿಯೊಬ್ಬ ಕಿತ್ತುಕೊಳ್ಳಬಹುದೆಂಬ ಕಾರಣಕ್ಕಾಗಿ ಹಾಳುಗೆಡಹುವುದು ಅಥವಾ ಓರ್ವ ಬಾಲಕನನ್ನು ದೊಡ್ಡವನಾದ ನಂತರ ಅವನು ಅಕ್ರಮಿಯೂ ಸತ್ಯನಿಷೇಧಿಯೂ ಆಗಿ ಮಾರ್ಪಡುವನು ಎಂಬ ಕಾರಣಕ್ಕಾಗಿ ಕೊಲೆ ಮಾಡುವುದು- ದಿವ್ಯಬೋಧನೆಯ ಆಧಾರದಲ್ಲೂ ಯಾವ ಮಾನವನಿಗೂ ಅಧಿಕಾರವಿಲ್ಲದಂತಹ ವಿಷಯವಾಗಿದೆ. ಆದ್ದರಿಂದ ಖಿಝ್ರ್‌ರು ಈ ಕೆಲಸವನ್ನು ಶರೀಅತ್‌ನ ಆದೇಶದಂತಲ್ಲ ಬದಲಾಗಿ ದೇವಾದೇಶದಂತೆ ಮಾಡಿದ್ದರು ಎಂದು ನಂಬುವುದಲ್ಲದೆ ನಮಗೆ ಬೇರೆ ದಾರಿಯಿಲ್ಲ. ಇಂತಹ ಕೆಲಸಗಳನ್ನು ಅಲ್ಲಾಹನು ಮಾನವೇತರ ಸೃಷ್ಟಿಗಳ ಮೂಲಕ ಮಾಡಿಸುತ್ತಾನೆ. ಘಟನೆಯ ಸ್ವರೂಪದಿಂದ ತಿಳಿದು ಬರುವುದೇನೆಂದರೆ ಅಲ್ಲಾಹನು ಮೂಸಾರನ್ನು(ಅ) ಆ ದಾಸನ ಬಳಿಗೆ ಕಳುಹಿಸುವುದರ ಉದ್ದೇಶವೇ, ಈ ದೇವನ ಕಾರ್ಯಾಗಾರದಲ್ಲಿ ಮಾನವನ ತಿಳುವಳಿಕೆಗೆ ಮೀರಿದ ಯಾವ ಯುಕ್ತಿಗಳು ಅಡಕವಾಗಿದೆ ಎಂದು ತೆರೆ ಸರಿಸಿ ಅವರಿಗೆ ಒಂದು ದೃಶ್ಯವನ್ನು ತೋರಿಸುವುದಾಗಿತ್ತು. ಅಲ್ಲಾಹನು ಹ. ಖಿಝ್ರ್‌ರ(ಅ) ಕುರಿತು 'ದಾಸ' ಎಂಬ ಪದ ಪ್ರಯೋಗ ಮಾಡಿರುವುದು ಅವರನ್ನು ಮಾನವ ಎಂದು ಕಲ್ಪಿಸಲು ಸಾಕಾಗಲಾರದು. ಅಲ್ ಅಂಬಿಯಾ ಅಧ್ಯಾಯದ ಸೂಕ್ತ 26, ಅಝ್ಝುಖ್‌ರುಫ್ ಅಧ್ಯಾಯದ ಸೂಕ್ತ 19 ಮತ್ತಿತರ ಕಡೆಗಳಲ್ಲಿ ದೇವಚರರಿಗೂ ಇಂತಹ ಪದ ಬಳಕೆಯಾಗಿದೆ.

21. ಅರ್ಥಾತ್- ಪಶ್ಚಿಮ ಸೀಮೆಯ ಕೊನೆಯ ತನಕ.

22. ಅರ್ಥಾತ್- ಅಲ್ಲಿ ಸೂರ್ಯಾಸ್ತಮದ ವೇಳೆ ಸೂರ್ಯ ಸಮುದ್ರದ ಕಪ್ಪು ಬಣ್ಣ ಮಿಶ್ರಿತ ನೀರಿನಲ್ಲಿ ಮುಳುಗುತ್ತಿದೆಯೇನೋ ಎಂದು ಭಾಸವಾಗುತ್ತದೆ.

ಅವರು ಅಲ್ಲೊಂದು ಜನಾಂಗವನ್ನು ನೋಡಿದರು. ನಾವು (ಹೀಗೆ) ಹೇಳಿದೆವು - "ಓ ದುಲ್‌ಕರ್ನೈನ್! ಇವರಿಗೆ ತೊಂದರೆ ಕೊಡುವ ಶಕ್ತಿಯೂ ನಿಮಗಿದೆ, ಅವರೊಂದಿಗೆ ಉತ್ತಮ ರೀತಿಯ ವ್ಯವಹಾರ ನಡೆಸುವ ಅಧಿಕಾರವೂ ನಿಮಗೆ ಇದೆ."

قَوْمًا ۗ قُلْنَا يٰذَا الْقَرْنَيْنِ اِمَّآ اَنْ تُعَذِّبَ وَاِمَّآ اَنْ تَتَّخِذَ فِيْهِمْ حُسْنًا ﴿٨٦﴾

87. ಆಗ ಅವರು, "ಇದರಲ್ಲಿ ಅಕ್ರಮವೆಸಗಿದವನಿಗೆ ನಾವು ಶಿಕ್ಷೆ ಕೊಡುವೆವು. ಅನಂತರ ಅವನು ತನ್ನ ಪ್ರಭುವಿನ ಕಡೆಗೆ ಮರಳಿ ಸಲ್ಪಡುವನು ಮತ್ತು ಅವನು (ಅಲ್ಲಾಹ್) ಆತನಿಗೆ ಇನ್ನಷ್ಟು ಕಠಿಣ ಶಿಕ್ಷೆ ಕೊಡುವನು.

قَالَ اَمَّا مَنْ ظَلَمَ فَسَوْفَ نُعَذِّبُهٗ ثُمَّ يُرَدُّ اِلٰى رَبِّهٖ فَيُعَذِّبُهٗ عَذَابًا نُّكْرًا ﴿٨٧﴾

88. ಅವರಲ್ಲಿ ಸತ್ಯವಿಶ್ವಾಸ ಸ್ವೀಕರಿಸುವವನಿಗೆ ಹಾಗೂ ಸತ್ಕರ್ಮ ವೆಸಗುವವನಿಗೆ ಸತ್ಫಲವಿದೆ. ನಾವು ಅವನಿಗೆ ಸರಳವಾದ ಆದೇಶ ಗಳನ್ನು ನೀಡುವೆವು" ಎಂದರು.

وَاَمَّا مَنْ اٰمَنَ وَعَمِلَ صَالِحًا فَلَهٗ جَزَآءَ ۨالْحُسْنٰى ۚ وَسَنَقُوْلُ لَهٗ مِنْ اَمْرِنَا يُسْرًا ﴿٨٨﴾

89. ಅನಂತರ ಅವರು (ಇನ್ನೊಂದು ದಂಡಯಾತ್ರೆಯ) ಸಿದ್ಧತೆ ಮಾಡಿದರು.

ثُمَّ اَتْبَعَ سَبَبًا ﴿٨٩﴾

90. ಕೊನೆಗೆ ಸೂರ್ಯನು ಉದಯಿಸುವ ಸರಹದ್ದಿನ ವರೆಗೆ ತಲಪಿದರು.[23] ಅಲ್ಲಿ ಬಿಸಿಲಿನಿಂದ ರಕ್ಷಣೆ ಪಡೆಯಲು ಯಾವುದೇ ಸಾಧನವನ್ನು ನಾವು ಮಾಡಿಕೊಟ್ಟಿರದಂತಹ ಒಂದು ಜನಾಂಗದ ಮೇಲೆ ಸೂರ್ಯನು ಉದಯಿಸುತ್ತಿದ್ದುದನ್ನು ಅವರು ಕಂಡರು.

حَتّٰٓى اِذَا بَلَغَ مَطْلِعَ الشَّمْسِ وَجَدَهَا تَطْلُعُ عَلٰى قَوْمٍ لَّمْ نَجْعَلْ لَّهُمْ مِّنْ دُوْنِهَا سِتْرًا ﴿٩٠﴾

91. ಅವರ ಅವಸ್ಥೆ ಇದಾಗಿತ್ತು ಮತ್ತು ದುಲ್‌ಕರ್ನೈನರ ಬಳಿ ಏನಿತ್ತೆಂಬುದನ್ನು ನಾವು ತಿಳಿದಿದ್ದೆವು.

كَذٰلِكَ ۗ وَقَدْ اَحَطْنَا بِمَا لَدَيْهِ خُبْرًا ﴿٩١﴾

92. ಅನಂತರ ಅವರು (ಮತ್ತೊಂದು ದಂಡಯಾತ್ರೆಯ) ಸಿದ್ಧತೆ ಮಾಡಿದರು.

ثُمَّ اَتْبَعَ سَبَبًا ﴿٩٢﴾

93. ಕೊನೆಗೆ ಎರಡು ಪರ್ವತಗಳ ನಡುವೆ ತಲಪಿದಾಗ ಯಾವ ಮಾತನ್ನೂ ತಿಳಿಯದಂತಹ ಒಂದು ಜನಾಂಗವನ್ನು ಅವರು ಕಂಡರು.

حَتّٰٓى اِذَا بَلَغَ بَيْنَ السَّدَّيْنِ وَجَدَ مِنْ دُوْنِهِمَا قَوْمًا ۙ لَّا يَكَادُوْنَ يَفْقَهُوْنَ قَوْلًا ﴿٩٣﴾

94. ಅವರು (ಹೀಗೆ) ಹೇಳಿದರು- "ಓ ದುಲ್‌ಕರ್ನೈನರೇ! ಯಅ್‌ಜೂಜ್

قَالُوْا يٰذَا الْقَرْنَيْنِ اِنَّ يَاْجُوْجَ وَمَاْجُوْجَ

23. ಅರ್ಥಾತ್- ಪೂರ್ವ ಸೀಮೆಯ ಕೊನೆಯ ತನಕ.

ಮತ್ತು ಮಅ್‌ಜೂಜರು[24] ಈ ಪ್ರದೇಶದಲ್ಲಿ ಗೊಂದಲ ಹಬ್ಬಿಸುತ್ತಿದ್ದಾರೆ. ನೀವು ನಮ್ಮ ಮತ್ತು ಅವರ ನಡುವೆ ಒಂದು ತಡೆಯನ್ನು ನಿರ್ಮಿಸಿ ಕೊಡುವ ಕಾರ್ಯಕ್ಕೆ ನಾವು ನಿಮಗೆ ತೆರಿಗೆ ಏನಾದರೂ ಕೊಡಬೇಕೇ?"

مُفْسِدُونَ فِي الْأَرْضِ فَهَلْ نَجْعَلُ
لَكَ خَرْجًا عَلَىٰ أَنْ تَجْعَلَ بَيْنَنَا
وَبَيْنَهُمْ سَدًّا ﴿٩٤﴾

95. (ಅದಕ್ಕೆ) ಅವರು, "ನನ್ನ ಪ್ರಭು ನನಗೆ ದಯಪಾಲಿಸಿರುವುದೇ ಸಾಕಷ್ಟಿದೆ. ನೀವು ನಿಮ್ಮ ಪರಿಶ್ರಮದಿಂದ ನನಗೆ ಸಹಾಯ ಮಾಡಿರಿ. ನಾನು ನಿಮ್ಮ ಮತ್ತು ಅವರ ನಡುವೆ ಒಂದು ತಡೆ ನಿರ್ಮಿಸಿಕೊಡುತ್ತೇನೆ-

قَالَ مَا مَكَّنِّي فِيهِ رَبِّي خَيْرٌ فَأَعِينُونِي
بِقُوَّةٍ أَجْعَلْ بَيْنَكُمْ وَبَيْنَهُمْ رَدْمًا ﴿٩٥﴾

96. ನನಗೆ ಕಬ್ಬಿಣದ ಹಾಳೆಗಳನ್ನು ತಂದುಕೊಡಿರಿ" ಎಂದರು. ಹೀಗೆ ಎರಡು ಪರ್ವತಗಳ ನಡುವಿನ ಖಾಲಿ ಸ್ಥಳವನ್ನು ತುಂಬಿಸಿದ ಬಳಿಕ ಅವರು ಜನರೊಡನೆ, "ಇನ್ನು ಬೆಂಕಿ ಉರಿಸಿರಿ" ಎಂದರು. ಕೊನೆಗೆ (ಈ ಕಬ್ಬಿಣದ ಗೋಡೆಯು) ಕೆಂಡದಂತೆ ಕೆಂಪಾದಾಗ ಅವರು, "ತನ್ನಿರಿ, ನಾನೀಗ ಇದರಲ್ಲಿ ಕರಗಿದ ತಾಮ್ರವನ್ನು ಹೊಯ್ದು ಬಿಡುವೆನು" ಎಂದರು.

آتُونِي زُبَرَ الْحَدِيدِ ۖ حَتَّىٰ إِذَا سَاوَىٰ
بَيْنَ الصَّدَفَيْنِ قَالَ انْفُخُوا ۖ حَتَّىٰ إِذَا
جَعَلَهُ نَارًا قَالَ آتُونِي أُفْرِغْ عَلَيْهِ قِطْرًا ﴿٩٦﴾

97. (ಈ ತಡೆಯು) ಯಅ್‌ಜೂಜ್ ಮತ್ತು ಮಅ್‌ಜೂಜರು ಅದರ ಮೇಲೆ ಹತ್ತಿಯೂ ಬರಲಾರದಂತಿತ್ತು. ಅದರಲ್ಲಿ ಕನ್ನ ಕೊರೆಯುವುದಂತೂ ಅವರಿಗೆ ಇನ್ನಷ್ಟು ಪ್ರಯಾಸಕರವಾಗಿತ್ತು.

فَمَا اسْطَاعُوا أَنْ يَظْهَرُوهُ وَمَا اسْتَطَاعُوا
لَهُ نَقْبًا ﴿٩٧﴾

98. ದುಲ್‌ಕರ್ನೈನ್ ಇಂತೆಂದರು - "ಇದು ನನ್ನ ಪ್ರಭುವಿನ ಕೃಪೆಯಾಗಿರುತ್ತದೆ. ಆದರೆ ನನ್ನ ಪ್ರಭುವಿನ ವಾಗ್ದಾನದ ಕಾಲ ಬಂದಾಗ ಅವನು ಇದನ್ನು ನೆಲಸಮ ಮಾಡಿ ಬಿಡುವನು. ನನ್ನ ಪ್ರಭುವಿನ ವಾಗ್ದಾನವು ಸತ್ಯಪೂರ್ಣವಾಗಿರುತ್ತದೆ."

قَالَ هَٰذَا رَحْمَةٌ مِنْ رَبِّي ۖ فَإِذَا جَاءَ
وَعْدُ رَبِّي جَعَلَهُ دَكَّاءَ ۖ وَكَانَ
وَعْدُ رَبِّي حَقًّا ﴿٩٨﴾

99. ಅಂದು[25] ನಾವು ಜನರನ್ನು (ಸಮುದ್ರದ ತೆರೆಗಳಂತೆ) ಪರಸ್ಪರ

وَتَرَكْنَا بَعْضَهُمْ يَوْمَئِذٍ يَمُوجُ فِي بَعْضٍ

24. ಯಅ್‌ಜೂಜ್- ಮಅ್‌ಜೂಜ್ ಎಂದರೆ ಹಿಂದಿನ ಕಾಲದಿಂದಲೂ ನಾಗರಿಕ ರಾಷ್ಟ್ರಗಳನ್ನು ಕೊಳ್ಳೆ ಹೊಡೆಯುತ್ತಿದ್ದ ಈಶಾನ್ಯ ಏಷ್ಯಾದ ಜನಾಂಗಗಳು. ಹಲವೊಮ್ಮೆ ಅವರ ಮಹಾಪೂರ ಏಷ್ಯಾ ಮತ್ತು ಯೂರೋಪಿನ ಕಡೆಗೆ ಹರಿಯುತ್ತಿತ್ತು. ಯೆಝ್‌ಕಿಯೇಲನ ಗ್ರಂಥದಲ್ಲಿ (ಭಾಗ- 38,39) ಅವರ ಪ್ರದೇಶ ರಷ್ಯಾ ಮತ್ತು ತೋಬಲ್ (ಇಂದಿನ ಬಾಲ್ಸ್ಕಿಕ್) ಮತ್ತು ಮಸ್ಕ್ (ಈಗಿನ ಮಾಸ್ಕೋ) ಎಂದು ಹೇಳಲಾಗಿದೆ. ಇಸ್ರಾಈಲೀ ಇತಿಹಾಸಜ್ಞ ಯುಸೀಪೋಸನ ಪ್ರಕಾರ ಅವರು ಸೇಥಿಯನ್ ಜನಾಂಗದವರಾಗಿದ್ದರು. ಅವರ ವಾಸ್ತವ್ಯ ಕಪ್ಪುಸಮುದ್ರದ ಉತ್ತರ ಮತ್ತು ಪೂರ್ವ ಪ್ರದೇಶದಲ್ಲಿತ್ತು. ಜೆರೋಮ್‌ನ ಪ್ರಕಾರ ಮಅ್‌ಜೂಜ್ ಕಾಕೇಸಸ್ ಪರ್ವತಗಳ ಉತ್ತರಕ್ಕೆ ಕೇಸ್ಪಿಯನ್ ಸಮುದ್ರದ ಬಳಿ ವಾಸವಾಗಿದ್ದರು.

25. ಅರ್ಥಾತ್- ನಿರ್ಣಾಯಕ ದಿನ. ನಿರ್ಣಾಯಕ ದಿನದ ನಿಶ್ಚಿತವಾದ ವಾಗ್ದಾನದ ಬಗ್ಗೆ ದುಲ್‌ಕರ್ನೈನ್ ನೀಡಿದ್ದ ಸೂಚನೆಯ ಹಿನ್ನೆಲೆಯಲ್ಲಿ ಈ ಸೂಕ್ತಗಳನ್ನು ಅವನ ಮಾತಿಗೆ ಪೂರಕವಾಗಿ ಹೇಳಲಾಗಿದೆ.

ಹೊಡೆದಾಡಿಕೊಳ್ಳಲು ಬಿಟ್ಟು ಬಿಡುವೆವು. ಕಹಳೆ ಊದಲ್ಪಡುವುದು. ಆ ಬಳಿಕ ನಾವು ಸಕಲ ಮಾನವರನ್ನು ಒಂದೆಡೆ ಒಟ್ಟು ಗೂಡಿಸುವೆವು.

وَّنُفِخَ فِي الصُّوْرِ فَجَمَعْنٰهُمْ جَمْعًا ﴿٩٩﴾

100. ಅಂದು ನಾವು ನರಕವನ್ನು ಸತ್ಯನಿಷೇಧಿಗಳ ಮುಂದೆ ತರುವೆವು.

وَّعَرَضْنَا جَهَنَّمَ يَوْمَئِذٍ لِّلْكٰفِرِيْنَ عَرْضًا ﴿١٠٠﴾

101. ನನ್ನ ಹಿತೋಪದೇಶದ ಬಗ್ಗೆ ಅಂಧರಾಗಿದ್ದುಕೊಂಡು ಏನನ್ನೂ ಆಲಿಸಲು ಸಿದ್ಧರಾಗಿರದ ಸತ್ಯನಿಷೇಧಿಗಳ ಮುಂದೆ.

الَّذِيْنَ كَانَتْ اَعْيُنُهُمْ فِيْ غِطَآءٍ عَنْ
ذِكْرِيْ وَكَانُوْا لَا يَسْتَطِيْعُوْنَ سَمْعًا ﴿١٠١﴾

102. ಸತ್ಯನಿಷೇಧವನ್ನು ಸ್ವೀಕರಿಸಿಕೊಂಡವರು ನನ್ನನ್ನು ಬಿಟ್ಟು ನನ್ನ ದಾಸರನ್ನು ತಮ್ಮ ರಕ್ಷಕ ಮಿತ್ರರಾಗಿಸಿಕೊಳ್ಳಬೇಕೆಂದು ಎಣಿಸಿರುವರೇ? ನಾವು ಇಂತಹ ಸತ್ಯನಿಷೇಧಿಗಳ ಸತ್ಕಾರಕ್ಕಾಗಿ ನರಕವನ್ನು ಸಿದ್ಧಗೊಳಿಸಿಟ್ಟಿರುತ್ತೇವೆ.

اَفَحَسِبَ الَّذِيْنَ كَفَرُوْٓا اَنْ يَّتَّخِذُوْا
عِبَادِيْ مِنْ دُوْنِيْٓ اَوْلِيَآءَ ؕ اِنَّآ اَعْتَدْنَا
جَهَنَّمَ لِلْكٰفِرِيْنَ نُزُلًا ﴿١٠٢﴾

103. ಓ ಪೈಗಂಬರರೇ, ಇವರೊಡನೆ ಹೇಳಿರಿ; ತಮ್ಮ ಕರ್ಮಗಳಲ್ಲಿ ಅತ್ಯಧಿಕ ವಿಫಲರು ಯಾರೆಂದು ನಿಮಗೆ ತಿಳಿಸಲೇ?

قُلْ هَلْ نُنَبِّئُكُمْ بِالْاَخْسَرِيْنَ اَعْمَالًا ﴿١٠٣﴾

104. ಲೌಕಿಕ ಜೀವನದಲ್ಲಿ ಯಾರ ಸಕಲ ಪರಿಶ್ರಮಗಳು ಸನ್ಮಾರ್ಗದಿಂದ ತಪ್ಪಿಹೋಗಿದ್ದು ತಾವು ಮಾಡುತ್ತಿರುವುದೆಲ್ಲವೂ ಸರಿಯೇ ಎಂದು ತಿಳಿದುಕೊಂಡಿದ್ದರೋ ಅವರು.

اَلَّذِيْنَ ضَلَّ سَعْيُهُمْ فِي الْحَيٰوةِ الدُّنْيَا
وَهُمْ يَحْسَبُوْنَ اَنَّهُمْ يُحْسِنُوْنَ صُنْعًا ﴿١٠٤﴾

105. ಇವರು ತಮ್ಮ ಪ್ರಭುವಿನ ವಚನಗಳನ್ನೂ ಅವನ ಮುಂದೆ ಹಾಜರಾಗಲಿಕ್ಕಿದೆ ಎಂಬುದನ್ನೂ ನಿರಾಕರಿಸಿದವರು. ಆದುದರಿಂದ ಇವರ ಸಕಲ ಕರ್ಮಗಳೂ ವ್ಯರ್ಥವಾಗಿ ಬಿಟ್ಟುವು. ಪುನರುತ್ಥಾನದ ದಿನ ನಾವು ಅವರಿಗೆ ಏನೂ ಮಹತ್ವ ನೀಡಲಾರೆವು.

اُولٰٓئِكَ الَّذِيْنَ كَفَرُوْا بِاٰيٰتِ رَبِّهِمْ وَلِقَآئِهٖ
فَحَبِطَتْ اَعْمَالُهُمْ فَلَا نُقِيْمُ لَهُمْ يَوْمَ
الْقِيٰمَةِ وَزْنًا ﴿١٠٥﴾

106. ಅವರು ಸತ್ಯವನ್ನು ನಿಷೇಧಿಸಿದುದಕ್ಕಾಗಿಯೂ ನನ್ನ ವಚನಗಳನ್ನು ಮತ್ತು ನನ್ನ ಸಂದೇಶವಾಹಕರನ್ನು ಅಪಹಾಸ್ಯ ಮಾಡಿದುದಕ್ಕಾಗಿಯೂ ಅವರ ಪ್ರತಿಫಲ ನರಕವಾಗಿರುತ್ತದೆ.

ذٰلِكَ جَزَآؤُهُمْ جَهَنَّمُ بِمَا كَفَرُوْا
وَاتَّخَذُوْٓا اٰيٰتِيْ وَرُسُلِيْ هُزُوًا ﴿١٠٦﴾

107. ಆದರೆ ಸತ್ಯವಿಶ್ವಾಸವಿಟ್ಟವರ ಹಾಗೂ ಸತ್ಕರ್ಮವೆಸಗಿದವರ ಆತಿಥ್ಯಕ್ಕಾಗಿ 'ಫಿರ್‌ದೌಸ್'ನ ಉದ್ಯಾನಗಳಿರುವುವು.

اِنَّ الَّذِيْنَ اٰمَنُوْا وَعَمِلُوا الصّٰلِحٰتِ كَانَتْ
لَهُمْ جَنّٰتُ الْفِرْدَوْسِ نُزُلًا ﴿١٠٧﴾

108. ಅವರು ಅದರಲ್ಲಿ ಅನಂತ ಕಾಲ ವಾಸಿಸುವರು ಮತ್ತು ಅಲ್ಲಿಂದ ಹೊರಟು ಬೇರೆಲ್ಲಿಯೂ ಹೋಗಲು ಅವರೆಂದೂ ಇಷ್ಟಪಡಲಾರರು.

خٰلِدِيْنَ فِيْهَا لَا يَبْغُوْنَ عَنْهَا حِوَلًا ﴿١٠٨﴾

109. ಓ ಪೈಗಂಬರರೇ, ಹೇಳಿರಿ- ನನ್ನ ಪ್ರಭುವಿನ ವಚನಗಳನ್ನು ಬರೆಯಲು ಸಮುದ್ರವು ಮಸಿಯಾಗಿ ಮಾರ್ಪಟ್ಟರೂ ಅದು ಮುಗಿದು ಹೋಗುವುದು. ಆದರೆ ನನ್ನ ಪ್ರಭುವಿನ ವಚನಗಳು ಮುಗಿಯಲಾರವು. ಮಾತ್ರವಲ್ಲ ಮತ್ತೂ ಅಷ್ಟೇ ಮಸಿಯನ್ನು ನಾವು ತಂದರೂ ಅದೂ ಸಾಕಾಗದು.[26]

قُلْ لَّوْ كَانَ الْبَحْرُ مِدَادًا لِّكَلِمٰتِ رَبِّيْ لَنَفِدَ الْبَحْرُ قَبْلَ اَنْ تَنْفَدَ كَلِمٰتُ رَبِّيْ وَلَوْ جِئْنَا بِمِثْلِهٖ مَدَدًا ١٠٩

110. ಓ ಪೈಗಂಬರರೇ, ಹೇಳಿರಿ- ನಾನು ನಿಮ್ಮಂತೆಯೇ ಇರುವ ಒಬ್ಬ ಮನುಷ್ಯ. ನಿಮ್ಮ ದೇವನು ಏಕ ಮಾತ್ರ ದೇವನೆಂದು ನನ್ನ ಕಡೆಗೆ 'ದಿವ್ಯವಾಣಿ' ಮಾಡಲಾಗುತ್ತಿದೆ. ಆದುದರಿಂದ ತನ್ನ ಪ್ರಭುವಿನ ಭೇಟಿಯನ್ನು ನಿರೀಕ್ಷಿಸುವವನು ಸತ್ಕರ್ಮಗಳನ್ನೆಸಗಲಿ ಮತ್ತು ಆರಾಧನೆಯಲ್ಲಿ ತನ್ನ ಪ್ರಭುವಿನೊಂದಿಗೆ ಯಾರನ್ನೂ ಸಹಭಾಗಿಯಾಗಿ ಮಾಡದಿರಲಿ.

قُلْ اِنَّمَآ اَنَا بَشَرٌ مِّثْلُكُمْ يُوْحٰٓى اِلَيَّ اَنَّمَآ اِلٰهُكُمْ اِلٰهٌ وَّاحِدٌ ۚ فَمَنْ كَانَ يَرْجُوْا لِقَاۤءَ رَبِّهٖ فَلْيَعْمَلْ عَمَلًا صَالِحًا وَّلَا يُشْرِكْ بِعِبَادَةِ رَبِّهٖٓ اَحَدًا ١١٠

26. ಅಲ್ಲಾಹನ 'ವಚನಗಳು' ಎಂದರೆ ಅವನ ಕಾರ್ಯ, ಕೌಶಲ್ಯ, ಪ್ರಕೃತಿಯ ಅದ್ಭುತ ಮತ್ತು ಯುಕ್ತಿಗಳಾಗಿವೆ.